ಪ್ರಕಾಶಕರು
ಶ್ರೀ ರಾಮಕೃಷ್ಣಾಶ್ರಮ
ಮೈಸೂರು

ಬೆಲೆ: ೦—೬—೦

ಚಿಕಾಗೊ ಉಪನ್ಯಾಸ

ಸ್ವಾಮಿ ವಿವೇಕಾನಂದ

ಪ್ರಕಾಶಕರು

ಶ್ರೀ ರಾಮಕೃಷ್ಣಾಶ್ರಮ

ಮೈಸೂರು.

ಮೊದಲನೆಯ ಮುದ್ರಣ ೧೯೪೮

ಎರಡನೆಯ ಮುದ್ರಣ ೧೯೫೨

ಪ್ರಕಾಶಕರು :

ಸ್ವಾಮಿ ಶಾಂಭವಾನಂದ,

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಮುದ್ರಕರು :

ಹಿಂದೂಸ್ಥಾನ್ ಪ್ರೆಸ್,

ಮೈಸೂರು.

ಚಿಕಾಗೊ ಉಪನ್ಯಾಸ

ಸ್ವಾಗತಕ್ಕೆ ಉತ್ತರ

(೧೮೯೩ ನೇ ಸೆಪ್ಟೆಂಬರ್ ೧೧ ನೇ ತಾರೀಖು ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣ.)

ಅಮೆರಿಕಾದ ಸಹೋದರ, ಸಹೋದರಿಯರೆ,

ನೀವು ನಮಗೆ ಪ್ರೀತಿಪೂರ್ವಕ ಕೊಟ್ಟ ಸ್ವಾಗತಕ್ಕೆ ಉತ್ತರವನ್ನು ಹೇಳಬೇಕೆಂದು ಬಯಸಿದಾಗ ನನ್ನ ಹೃದಯ ಒಂದು ಅವರ್ಣನೀಯ ಆನಂದದಿಂದ ತುಂಬಿ ತುಳುಕಾಡುತ್ತಿದೆ. ಜಗತ್ತಿನಲ್ಲಿ ಅತ್ಯಂತ ಪ್ರಾಚೀನತಮ ಸನ್ಯಾಸಿಗಳ ಪಂಥದ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಹಲವು ಧರ್ಮಗಳ ಮಾತೆಯ ಪರವಾಗಿ ನಾನು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಎಲ್ಲಾ ಪಂಗಡಗಳ, ಎಲ್ಲಾ ಮತಕ್ಕೆ ಸೇರಿದ ಕೋಟ್ಯನುಕೋಟಿ ಭಾರತೀಯರ ಪರವಾಗಿ ನಿಮಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಇದೇ ವೇದಿಕೆಯಮೇಲೆ ನಿಂತು, ಪೌರಾತ್ಯದೇಶಗಳಿಂದ ಬಂದ ಪ್ರತಿನಿಧಿಗಳನ್ನು ಕುರಿತು, "ಬಹಳ ದೂರದಿಂದ ಬಂದ ಈ ಮಹನೀಯರು ಸಹಾನುಭೂತಿಯ ಭಾವನೆಯನ್ನು ತಮ್ಮ ದೇಶಗಳಿಗೆ ಒಯ್ಯುವ ಗೌರವಕ್ಕೆ ಭಾಗಿಗಳಾಗುವರು" ಎಂದು ಹೇಳಿದವರಿಗೂ ನನ್ನ ಕೃತಜ್ಞತೆಗಳು. ಜಗತ್ತಿಗೆಲ್ಲಾ ಧಾರ್ಮಿಕ ಸಹಾನುಭೂತಿ ಮತ್ತು ಸಾರ್ವತ್ರಿಕ ಅಂಗೀಕಾರವನ್ನು ಬೋಧಿಸಿದ ಧರ್ಮಕ್ಕೆ ನಾನು ಸೇರಿದವನೆಂಬುದು ಒಂದು ಹೆಮ್ಮೆ. ನಾವು ವಿಶ್ವಸಹಾನುಭೂತಿಯನ್ನು ಮಾತ್ರ ಒಪ್ಪಿಕೊಳ್ಳುವವರಲ್ಲ; ಜತೆಗೆ ಎಲ್ಲಾ ಧರ್ಮಗಳೂ ಸತ್ಯವೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಎಲ್ಲಾ ಜನಾಂಗದಲ್ಲೂ, ಎಲ್ಲಾ ಧಾರ್ಮಿಕ ಪಂಥಗಳಲ್ಲೂ ಕೋಟಲೆಗೆ ಸಿಕ್ಕಿ ತುತ್ತಾಗಿ ನಿರಾಶ್ರಿತರಾದವರಿಗೆ ಒಂದು ಆಶ್ರಯವನ್ನು ಕಲ್ಪಿಸಿಕೊಟ್ಟ ದೇಶಕ್ಕೆ ನಾನು ಸೇರಿದವನೆಂಬುದು ಒಂದು ಹೆಮ್ಮೆ. ಯಾವ ವರುಷ ರೋಮನ್ ಚಕ್ರಾಧಿಪತ್ಯದವರ ದೌರ್ಜನ್ಯದಿಂದ ಯಹೂದ್ಯರ ಪವಿತ್ರ ದೇವಾಲಯ ನುಚ್ಚು ನೂರಾಗಿ ಹೋಯಿತೋ ಅದೇ ವರುಷ ಅವರು ದಕ್ಷಿಣ ಭರತಖಂಡಕ್ಕೆ ಬಂದು ನಮ್ಮಲ್ಲಿ ಆಶ್ರಯ ಪಡೆದರು. ಅವರನ್ನು ಕೂಡ ನಮ್ಮ ಹೃದಯದಲ್ಲಿ ಅಳವಡಿಸಿಕೊಂಡಿರುವೆವು ಎಂದು ಹೇಳುವುದಕ್ಕೆ ಒಂದು ಹೆಮ್ಮೆ. ಹಿಂದೆ ಪ್ರಖ್ಯಾತರಾದ

ಜಾರತೂಷ್ಟ್ರ ಜನಾಂಗದ ಅವಶೇಷಕ್ಕೂ (ಪಾರ್ಸಿಮತಕ್ಕೆ) ಆಶ್ರಯವಿತ್ತು ಇಂದಿಗೂ ಅದನ್ನು ಪೋಷಿಸುತ್ತಿರುವ ಧರ್ಮಕ್ಕೆ ನಾನು ಸೇರಿದವನೆಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ. ಸಹೋದರರೆ ಬಾಲ್ಯಾರಭ್ಯದಿಂದಲೂ ಪಠಿಸುತ್ತಿದ್ದ ಶ್ಲೋಕ ಒಂದನ್ನು ನಾನು ನಿಮಗೆ ಉದಹರಿಸುತ್ತೇನೆ—"ಬೇರೆಬೇರೆ ಸ್ಥಳಗಳಲ್ಲಿ ಹುಟ್ಟಿದ ಹಲವು ನದಿಗಳು ಕೊನೆಗೆ ಎಲ್ಲಾ ಸಾಗರಕ್ಕೆ ಸೇರುವಂತೆ, ಹೇ ದೇವರೆ, ಮಾನವರು ಅವರವರ ಸಂಸ್ಕಾರಗಳಿಗೆ ತಕ್ಕಂತೆ ಅನುಸರಿಸುವ ನೇರವಾಗಿಯೋ ವಕ್ರವಾಗಿಯೋ ಇರುವ ಬೇರೆಬೇರೆ ದಾರಿಗಳೆಲ್ಲ ನಿನ್ನೆಡೆಗೆ ಕರೆದೊಯ್ಯುವುವು."

ಜಗತ್ತಿನ ಇತಿಹಾಸದಲ್ಲಿ ಮಹಾದ್ಭುತ ಸಭೆಗಳಲ್ಲಿ ಒಂದಾದ ಇಂದಿನ ಸಭೆ, ಗೀತೆಯಲ್ಲಿ ಬೋಧಿಸಿದ, ಅತ್ಯಮೋಘವಾದ "ಯಾರಾದರಾಗಲೀ ಯಾವ ಆಕಾರವನ್ನು ಪೂಜಿಸಿಯಾಗಲಿ ನನ್ನಲ್ಲಿಗೆ ಬಂದರೆ, ನಾನು ಅವರನ್ನು ಹಾಗೆಯೆ ಅನುಗ್ರಹಿಸುವೆನು. ಕೊನೆಗೆ ನನ್ನನ್ನೆ ಮುಟ್ಟುವ ಹಲವು ದಾರಿಗಳಲ್ಲಿ ಮಾನವರೆಲ್ಲ ಪ್ರಯತ್ನಪಡುತ್ತಿರುವರು" ಎಂಬ ಸಂದೇಶವನ್ನು ಜಗತ್ತಿಗೆ ಸಾರುವುದಕ್ಕೆ, ಅದನ್ನು ಸಮರ್ಥಿಸುವುದಕ್ಕೆ ಇದೊಂದೆ ಸಾಕು. ಸ್ವಮತಾಭಿಮಾನಿ ಅನ್ಯಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನ ಈ ಸುಂದರ ಜಗತ್ತನ್ನು ಬಹುಕಾಲದಿಂದಲೂ ಆವರಿಸಿಕೊಂಡಿರುವುದು. ಇವು ಜಗತ್ತನ್ನೆಲ್ಲ ಹಿಂಸೆಯಿಂದ ತುಂಬಿರುವುವು, ಹಲವುವೇಳೆ ನರರಕ್ತದಿಂದ ತೊಯಿಸಿರುವುವು. ಸಂಸ್ಕೃತಿಯನ್ನು ನಾಶಮಾಡಿರುವುವು. ಹಲವು ದೇಶಗಳನ್ನು ನಿರಾಶೆಯ ಕೂಪಕ್ಕೆ ತಳ್ಳಿರುವುವು. ಇಂತಹ ಉಗ್ರ (ಧರ್ಮಾಂಧತೆಯ) ದೈತ್ಯರಿಲ್ಲದೇ ಇದ್ದರೆ ಮಾನವ ಜನಾಂಗ ಇಂದಿಗಿಂತಲೂ ಎಷ್ಟೋ ಮುಂದುವರಿದು ಹೋಗಬೇಕಾಗಿತ್ತು. ಆದರೆ ಅವುಗಳ ಅಂತ್ಯಕಾಲ ಸಮಿಾಪಿಸಿದೆ. ಈ ಸಭೆಯ ಸಮಾರಂಭವನ್ನು ಸೂಚಿಸಿದ ಘಂಟಾನಾದವು ಖಡ್ಗದಮೂಲಕವಾಗಿಯಾಗಲೀ, ಲೇಖನಿಯ ಮೂಲಕವಾಗಲೀ ಆದ ಎಲ್ಲಾ ಮತಾಂಧತೆಯ, ಅನ್ಯಮತ ಹಿಂಸೆಯ ಮತ್ತು ಒಂದೇ ಗುರಿಯೆಡೆಗೆ ನಡೆಯುತ್ತಿರುವ ದಾರಿಗರಲ್ಲಿ ಆದ ಮನಸ್ತಾಪಗಳೆಂಬ ಭೂತಗಳ ಅಂತ್ಯಕ್ರಿಯೆಯನ್ನು ಜಗತ್ತಿಗೆ ಸೂಚಿಸುವ ಧ್ವನಿಯಾಗಲೆಂಬುದೇ ನನ್ನ ಆಶಯ.

ನಮ್ಮಲ್ಲಿ ಏತಕ್ಕೆ ಒಮ್ಮತವಿಲ್ಲ?

(೧೫ ನೇ ಸೆಪ್ಟೆಂಬರ್ ೧೮೯೩)

ನಾನೊಂದು ಸಣ್ಣ ಕತೆಯನ್ನು ನಿಮಗೆ ಹೇಳುತ್ತೇನೆ. "ಒಬ್ಬರು ಇನ್ನೊಬ್ಬರನ್ನು ದೂರುವುದನ್ನು ನಿಲ್ಲಿಸೋಣ" ಎಂದು ಈಗತಾನೆ ಮುಗಿಸಿದ ವಾಗ್ಮಿಗಳ ಮಾತನ್ನು ಕೇಳಿರುವಿರಿ. ಇಷ್ಟೊಂದು ಭಿನ್ನಾಭಿಪ್ರಾಯಗಳಿರುವುದರಿಂದ ಅವರಿಗೆ ತುಂಬಾ ವ್ಯಥೆಯಾಯಿತು.

ಈ ಭಿನ್ನಾಭಿಪ್ರಾಯಗಳಿಗೆ ಕಾರಣವನ್ನು ಉದಹರಿಸುವ ಒಂದು ಕಥೆಯನ್ನು ನಿಮಗೆ ಹೇಳಬೇಕೆಂದು ಬಯಸುತ್ತೇನೆ. ಒಂದು ಕಪ್ಪೆ ಭಾವಿಯಲ್ಲಿ ವಾಸವಾಗಿತ್ತು. ಅಲ್ಲಿ ಅದು ಬಹುಕಾಲದಿಂದಲೂ ಇತ್ತು. ಅದು ಅಲ್ಲೇ ಹುಟ್ಟಿ ಅಲ್ಲೇ ಬೆಳೆಯಿತು. ಆದರೂ ಅದಿನ್ನೂ ಸಣ್ಣ ಕಪ್ಪೆ. ಆ ಕಪ್ಪೆಗೆ ಕಣ್ಣು ಇತ್ತೋ ಇಲ್ಲವೋ ಎಂದು ಹೇಳುವುದಕ್ಕೆ ಇಂದಿನ ವಿಕಾಸವಾದಿಗಳು ಅಲ್ಲಿ ಇರಲಿಲ್ಲ. ಆದರೆ ನಮ್ಮ ಕಥೆಗಾಗಿ ಅದಕ್ಕೆ ಕಣ್ಣುಗಳು ಇದ್ದುವು ಎಂದು ಭಾವಿಸೋಣ. ಅದು ಪ್ರತಿದಿನವೂ ಕ್ರಿಮಿ ಕೀಟಗಳನ್ನು ಶುದ್ಧಿಮಾಡುತ್ತಿರುವುದನ್ನು ನೋಡಿದರೆ ಇಂದಿನ ಕ್ರಿಮಿ ಶಾಸ್ತ್ರಜ್ಞರಿಗೂ ಕೀರ್ತಿಯನ್ನು ತರುವಂತೆ ಇತ್ತು. ಹೀಗೆಯೇ ಅದು ಬೆಳೆಯುತ್ತಾ ನುಣ್ಣಗೆ ಸ್ವಲ್ಪ ದಪ್ಪವಾಯಿತು. ಹೀಗಿರುವಾಗ ಒಂದು ದಿನ ಸಮುದ್ರದಲ್ಲಿದ್ದ ಮತ್ತೊಂದು ಕಪ್ಪೆ ಭಾವಿಗೆ ಬಂದು ಬಿತ್ತು.

ಭಾವಿ ಕಪ್ಪೆ—ನೀನು ಎಲ್ಲಿಂದ ಬಂದೆ?

ಸಮುದ್ರ ಕಪ್ಪೆ—ನಾನು ಸಮುದ್ರದಿಂದ ಬಂದೆ

ಭಾವಿ ಕಪ್ಪೆ—"ಸಮುದ್ರ! ಅದು ಎಷ್ಟು ದೊಡ್ಡದು? ಅದು ನನ್ನ ಭಾವಿಯಷ್ಟು ದೊಡ್ಡದೆ?" ಎಂದು ಹೇಳಿ ಭಾವಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ನೆಗೆಯಿತು.

ಸಮುದ್ರ ಕಪ್ಪೆ— ಅಯ್ಯಾ ನನ್ನ ಸ್ನೇಹಿತನೇ, ಸಮುದ್ರವನ್ನು ಭಾವಿಯೊಂದಿಗೆ ಹೇಗೆ ಹೋಲಿಸಬಲ್ಲೆ?

ಭಾವಿಯ ಕಪ್ಪೆ ಇನ್ನೊಂದುಸಲ ನೆಗೆದು, "ನಿನ್ನ ಸಮುದ್ರ ಇಷ್ಟು ದೊಡ್ಡದೊ?" ಎಂದು ಕೇಳಿತು. ಸಮುದ್ರ ಕಪ್ಪೆ, "ಎಂತಹ ಹುಚ್ಚುತನ ನಿನ್ನದು. ಸಮುದ್ರವನ್ನು ನಿನ್ನ ಭಾವಿಗೆ ಹೋಲಿಸುವೆಯಲ್ಲ?" ಎಂದಿತು.

ಭಾವಿಯ ಕಪ್ಪೆ—"ಹಾಗಾದರೆ ಆಗಲಿ, ನನ್ನ ಭಾವಿಗಿಂತ ದೊಡ್ಡದು ಯಾವುದೂ ಇಲ್ಲ. ಇದಕ್ಕಿಂತ ದೊಡ್ಡದು ಯಾವುದೂ ಇರಲಾರದು. ಇವನೊಬ್ಬ ಸುಳ್ಳುಗಾರ. ಇವನನ್ನು ಹೊರಗೆ ನೂಕಿ" ಎಂದಿತು.

ಇದೇ ಯಾವಾಗಲೂ ನಾವಿರುವ ಸ್ಥಿತಿ. ನಾನೊಬ್ಬ ಹಿಂದು. ನಾನು ನನ್ನ ಸಣ್ಣ ಭಾವಿಯಲ್ಲಿ ಕುಳಿತುಕೊಂಡು ಜಗತ್ತೆಲ್ಲಾ ಈ ನನ್ನ ಭಾವಿಯೊಂದೆ ಎಂದು ಯೋಚಿಸುತ್ತಿರುವೆನು. ಕ್ರೈಸ್ತರು ತಮ್ಮ ಸಣ್ಣ ಭಾವಿಯಲ್ಲಿ ಕುಳಿತುಕೊಂಡು ಪ್ರಪಂಚವೆಲ್ಲಾ ಇಷ್ಟೆ ಎಂದು ತಿಳಿಯುವರು. ನಮ್ಮ ಈ ಸಣ್ಣ ಸಣ್ಣ ಪ್ರಪಂಚದ ಮೇರೆಯನ್ನು ಒಡೆದುಹಾಕುವುದಕ್ಕೆ ಪ್ರಯತ್ನಿಸುತ್ತಿರುವ ಅಮೆರಿಕಾ ದೇಶಿಯರೆ, ನಿಮಗೆ ನನ್ನ ಕೃತಜ್ಞತೆಗಳು. ಈ ಗುರಿಯನ್ನು ಮುಂದೆ ಸಾಧಿಸುವುದಕ್ಕೆ ಭಗವಂತನು ಸಹಾಯಮಾಡುವನೆಂದು ಆಶಿಸುತ್ತೇನೆ.

ಹಿಂದೂ ಧರ್ಮ

ಒಂದು ಲೇಖನ

(೧೮೯೩ ನೇ ಸೆಪ್ಟಂಬರ್ ೧೯ ರಲ್ಲಿ ವಿಶ್ವಧರ್ಮ ಸಮ್ಮೇಳನದಲ್ಲಿ ಓದಿದ್ದು)

ಇತಿಹಾಸ ಪೂರ್ವದಿಂದಲೂ ಇಂದಿನವರೆಗೆ ಮೂರು ಧರ್ಮಗಳು ಆಚರಣೆಯಲ್ಲಿದೆ. ಅವು ಹಿಂದೂ ಧರ್ಮ, ಪಾರ್ಸಿ ಧರ್ಮ ಮತ್ತು ಯಹೂದ್ಯಧರ್ಮಗಳು. ಇವೆಲ್ಲಕ್ಕೂ ಅಸಾಧ್ಯವಾದ ಪೆಟ್ಟು ಬಿದ್ದಿದೆ. ಆದರೂ ಇವು ಇನ್ನೂ ಉಳಿದಿರುವುದನ್ನು ನೋಡಿದರೆ ಅಂತರಾಳದಲ್ಲಿ ಗುಪ್ತವಾಗಿರುವ ಚೇತನಕ್ಕೆ ಸಾಕ್ಷಿಯಾಗಿದೆ. ಯಹೂದ್ಯಧರ್ಮವು ತನ್ನಿಂದ ಹುಟ್ಟಿದ ಕ್ರೈಸ್ತ ಧರ್ಮವನ್ನು ಜೀರ್ಣಿಸಿಕೊಳ್ಳಲಾರದಾಗ ಅದು ಕ್ರೈಸ್ತ ಧರ್ಮದಿಂದಲೇ ಪರಾಜಿತವಾಗಿ ತನ್ನ ತಾಯ್ನಾಡನ್ನು ಬಿಡಬೇಕಾಗಿ ಬಂದಿತು. ಹಿಂದೆ ಪ್ರಖ್ಯಾತವಾದ ತಮ್ಮ ಧರ್ಮವನ್ನು ಸಾರುವುದಕ್ಕೆ ಎಲ್ಲೋ ಹಲಕೆಲವು ಮಂದಿ ಪಾರ್ಸಿಯರು ಮಾತ್ರ ಉಳಿದರು. ಆದರೆ ಭರತಖಂಡದಲ್ಲಿ ಒಂದು ಪಂಗಡವಾದಮೇಲೆ ಮತ್ತೊಂದು ಪಂಗಡವೆದ್ದು ವೈದಿಕ ಧರ್ಮದ ತಳಹದಿಯನ್ನೇ ನಡುಗಿಸುವಂತೆ ಕಂಡಿತು. ಭಯಂಕರವಾದ ಭೂಕಂಪವಾದಾಗ ಸಾಗರದ ತೀರದಲ್ಲಿ ನೀರು ಕೆಲವು ಕಾಲ ಮಾತ್ರ ಹಿಂದೆ ಸಾಗಿ ಪುನಃ ಸಾವಿರಪಾಲು ವೇಗವಾಗಿ ಎಲ್ಲವನ್ನೂ ಆವರಿಸುವ ಪ್ರಚಂಡ ಪ್ರವಾಹದಂತೆ ಈ ಘನಘರ್ಜನೆ ನಿಂತಮೇಲೆ ಮೂಲ ಧರ್ಮವೆಂಬ ಅಗಾಧವಾದ ದೇಹವು ಪಂಗಡಗಳನ್ನೆಲ್ಲಾ ಹೀರಿಕೊಂಡಿತು. ಜೀರ್ಣಿಸಿ ರಕ್ತಗತ ಮಾಡಿಕೊಂಡಿತು.

ಯಾವುದರೊಂದಿಗೆ ಹೋಲಿಸಿದರೆ ಇಂದಿನ ವಿಜ್ಞಾನ ಶಾಸ್ತ್ರದ ನವನವಾನ್ವೇಷಣೆಗಳು ಕೇವಲ ಪ್ರತಿ ಧ್ವನಿಯಂತೆ ತೋರುವುವೊ ಅಂತಹ ವೇದಾಂತ ತತ್ತ್ವದ ಆಧ್ಯಾತ್ಮಿಕ ಪ್ರಗತಿಯಿಂದ ಹಿಡಿದು ವಿಗ್ರಹ ಆರಾಧನೆಯೆಂಬ ಅಪೂರ್ಣ ಭಾವನೆಗಳು, ಜತೆಗೆ ಲೆಕ್ಕವಿಲ್ಲದಷ್ಟು ಪುರಾಣಗಳ ರಾಶಿ, ಬೌದ್ಧರ ಅಜ್ಞೇಯವಾದ, ಜೈನರ ನಾಸ್ತಿಕತೆ ಮುಂತಾದುವುಗಳಿಗೆಲ್ಲಾ ಹಿಂದೂ ಧರ್ಮದಲ್ಲಿ ಒಂದು ಸ್ಥಾನವಿದೆ.

ಹಾಗಾದರೆ ಭಿನ್ನ ಭಿನ್ನ ವಾದ ಇಂತಹ ಹಲವು ವ್ಯಾಸಾರ್ಧರೇಖೆಗಳು (Radii) ಸಂಧಿಸುವ ಕೇಂದ್ರವಾವುದು? ಎಂಬ ಪ್ರಶ್ನೆಯೊಂದು ಏಳುವುದು. ತೋರಿಕೆಗೆ ಪರಸ್ಪರ ವಿರೋಧದಂತೆ ಕಾಣುವ ಇವುಗಳೆಲ್ಲ

ನಿಂತಿರುವ ಸರ್ವಸಾಮಾನ್ಯವಾದ ತಳಹದಿ ಎಲ್ಲಿರುವುದು? ನಾನು ಪರಿಹರಿಸಬೇಕೆಂದಿರುವ ಪ್ರಶ್ನೆಯೇ ಇದು.

ಹಿಂದೂಗಳು ವೇದಗಳೆಂಬ ಆಪ್ತವಾಕ್ಯದ ಮೂಲಕವಾಗಿ ತಮ್ಮ ಧರ್ಮವನ್ನು ಪಡೆದರು. ವೇದಗಳು ಆದಿ ಅಂತ್ಯರಹಿತವೆಂದು ಅವರು ತಿಳಿದಿರುವರು. ಒಂದು ಗ್ರಂಥಕ್ಕೆ ಹೀಗೆ ಆದಿ ಅಂತ್ಯವಿಲ್ಲವೆಂದರೆ ಇಲ್ಲಿ ನೆರೆದ ಪ್ರೇಕ್ಷಕ ವರ್ಗಕ್ಕೆ ಹಾಸ್ಯಾಸ್ಪದವಾಗಿ ತೋರಬಹುದು. ಆದರೆ ವೇದವೆಂದರೆ ಇಲ್ಲಿ ಯಾವ ಪುಸ್ತಕಕ್ಕೂ ಅನ್ವಯಿಸುವುದಿಲ್ಲ. ಹಲವು ವ್ಯಕ್ತಿಗಳು ಅನೇಕ ಕಾಲದಿಂದಲೂ ಕಂಡುಹಿಡಿದು ಶೇಖರಿಸಿಡಲ್ಪಟ್ಟ ಆಧ್ಯಾತ್ಮಿಕ ನಿಯಮಗಳು. ಹೇಗೆ ಆಕರ್ಷಣ ನಿಯಮ ಅದನ್ನು ಕಂಡು ಹಿಡಿಯುವುದಕ್ಕಿಂತ ಹಿಂದೆ ಇದ್ದಿತೋ ಮತ್ತು ಮಾನವರೆಲ್ಲರೂ ಅದನ್ನು ಮರೆತರೂ ಮುಂದೆಯೂ ಹೇಗೆ ಇರಬಲ್ಲುದೋ ಇದರಂತೆಯೇ ಆಧ್ಯಾತ್ಮಿಕ ಜಗತ್ತನ್ನು ರಕ್ಷಿಸುತ್ತಿರುವ ನಿಯಮಗಳೂ ಕೂಡ, ಜೀವ ಜೀವರಿಗೆ, ಜೀವಕ್ಕೆ ಮತ್ತು ಎಲ್ಲಾ ಜೀವಿಗಳ ತಂದೆಯಾದ ದೇವರಿಗೆ ಇರುವ ನೈತಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ನಿಯಮಗಳು. ಅವು ಗಳನ್ನು ಕಂಡುಹಿಡಿಯುವುದಕ್ಕಿಂತ ಮುಂಚೆಯೂ ಇದ್ದುವು. ಅವು ಗಳನ್ನು ನಾವು ಮರೆತರೂ ಕೂಡ ಇರಬಲ್ಲುವು.

ಈ ನಿಯಮಗಳನ್ನು ಕಂಡುಹಿಡಿದವರನ್ನು ಋಷಿಗಳೆಂದು ಕರೆಯು ತ್ತೇವೆ. ಅವರನ್ನು ಮುಕ್ತಾತ್ಮರೆಂದು ಗೌರವಿಸುತ್ತೇವೆ. ಇವರಲ್ಲಿ ಅತ್ಯಂತ ಪ್ರಖ್ಯಾತರಾದವರ ಪೈಕಿ ಕೆಲವು ಸ್ತ್ರೀಯರು ಕೂಡ ಇದ್ದರೆಂದು ಇಲ್ಲಿನ ಸಭಿಕರಿಗೆ ಹೇಳಲು ನನಗೆ ಸಂತೋಷವಾಗುವುದು.

ಆದರೆ ನಾವು ಇಲ್ಲಿ ಇನ್ನೊಂದು ಆಕ್ಷೇಪಣೆಯನ್ನು ತರಬಹುದು. ನಿಯಮ ನಿಯಮದ ದೃಷ್ಟಿಯಿಂದ ಅಂತ್ಯವಿಲ್ಲದೆ ಇರಬಹುದು. ಆದರೆ ಅವಕ್ಕೆ ಒಂದು ಆದಿ ಇರಲೇಬೇಕು ಎನ್ನಬಹುದು. ವೇದಗಳು ಸೃಷ್ಟಿಗೆ ಆದಿ ಅಂತ್ಯವಿಲ್ಲವೆಂದು ಸಾರುತ್ತವೆ. ವಿಶ್ವದಲ್ಲಿರುವ ಒಟ್ಟು ಶಕ್ತಿಯ ಮೊತ್ತವು ಯಾವಾಗಲೂ ಒಂದೇ ಎಂಬುದನ್ನು ವೈಜ್ಞಾನಿಕರು ಸಿದ್ಧಾಂತ ಮಾಡಿರುವರಷ್ಟೆ. ಹಾಗಾದರೆ ಏನೂ ಇಲ್ಲದೇ ಇರುವ ಒಂದು ಸಮಯವಿತ್ತು, ಎಂದು ಹೇಳಿದರೆ ಈಗ ವ್ಯಕ್ತವಾಗಿರುವ ಶಕ್ತಿಯೆಲ್ಲಾ ಎಲ್ಲಿತ್ತು? ದೇವರಲ್ಲಿ ಇವುಗಳೆಲ್ಲಾ ಸುಪ್ತಾವಸ್ಥೆಯಲ್ಲಿತ್ತು ಎಂದು ಕೆಲವರು ಹೇಳುವರು. ಹಾಗಾದರೆ ಕೆಲವು ವೇಳೆ ದೇವರು ಸುಪ್ತಾವಸ್ಥೆಯಲ್ಲೂ ಮತ್ತೆ ಕೆಲವು ವೇಳೆ ವ್ಯಕ್ತಾವಸ್ಥೆಯಲ್ಲೂ ಇದ್ದನೆಂದರೆ ಅವನೂ ವಿಕಾರಕ್ಕೆ

ಒಳಪಟ್ಟಂತೆ ಆಗುವುದು. ಆಕಾರಕ್ಕೆ ಒಳಪಟ್ಟಿರುವುದೆಲ್ಲ ಒಂದು ಮಿಶ್ರ. ಮಿಶ್ರವಾದರೆ ನಾಶವೆಂಬ ಆಕಾರಕ್ಕೆ ಒಳಗಾಗಲೇ ಬೇಕು. ಅಂದರೆ ದೇವರು ಸಾಯುವನು ಎಂದ ಹಾಗೆ ಆಯಿತು. ಇದಕ್ಕೆ ಅರ್ಥವಿಲ್ಲ. ಆದಕಾರಣವೇ ಸೃಷ್ಟಿಯಿಲ್ಲದ ಕಾಲವೆ ಎಂದಿಗೂ ಇಲ್ಲ.

ನಾನು ಒಂದು ಉಪಮಾನವನ್ನು ಉಪಯೋಗಿಸಬಹುದಾದರೆ, ಸೃಷ್ಟಿ ಮತ್ತು ಸೃಷ್ಟಿಕರ್ತ ಇವುಗಳೆರಡೂ ಆದಿ ಅಂತ್ಯವಿಲ್ಲದ ಸಮಾನಾಂತರವಲ್ಲಿ ಹರಿಯುತ್ತಿರುವ ಎರಡು ಸರಳರೇಖೆಯಂತೆ. ಈಶ್ವರನು ನಿತ್ಯ ಸೃಷ್ಟಿಯಲ್ಲಿ ನಿರತನಾದ ದೇವರು. ಅವನ ಶಕ್ತಿಮಹಿಮೆಯಿಂದ ಅವ್ಯಕ್ತದಿಂದ ಹಲವು ಜಗತ್ತುಗಳು ಹುಟ್ಟಿ, ಕೆಲವು ಕಾಲ ಬಾಳಿ ಪುನಃ ನಾಶವಾಗುವುವು. ಇದನ್ನೇ ಬ್ರಾಹ್ಮಣರ ಹುಡುಗರು ಪ್ರತಿದಿನವೂ ಪಠಿಸುತ್ತಿರುವುದು. ಈಶ್ವರನು ಸೂರ್ಯಚಂದ್ರರನ್ನು ಹಿಂದಿನ ಕಾಲದ ಸೂರ್ಯಚಂದ್ರರಂತೆ ಸೃಷ್ಟಿಸಿದನು. [ಸೂರ್ಯಚಂದ್ರಮಸೌ ಧಾತಾಯಥಾ ಪೂರ್ವಮಕಲ್ಪಯತ್]

ನಾನು, ಇಲ್ಲಿ ನಿಂತು ಕಣ್ಣನ್ನು ಮುಚ್ಚಿಕೊಂಡು ನನ್ನ ಇರವನ್ನು "ನಾನು" "ನಾನು" "ನಾನು" ಎನ್ನುತ್ತ, ಗ್ರಹಿಸಲು ಯತ್ನಿಸಿದರೆ ಯಾವ ಭಾವನೆ ನನಗೆ ಬರುವುದು? ದೇಹದ ಆಲೋಚನೆ. ಹಾಗಾದರೆ ನಾನು ಕೇವಲ ಜಡವಸ್ತುಗಳ ಸಂಯೋಗವೇ? "ಇಲ್ಲ" ದೇಹದಲ್ಲಿರುವ ಆತ್ಮ ನಾನು ಎಂದು ವೇದಗಳು ಹೇಳುತ್ತವೆ. ದೇಹ ಸಾಯುತ್ತದೆ. ಆದರೆ ನಾನು ಸಾಯುವುದಿಲ್ಲ. ಈಗ ನಾನು ದೇಹದಲ್ಲಿರುವೆನು. ಇದು ನಾಶವಾಗುತ್ತದೆ. ಆದರೆ ನಾನು ಜೀವಿಸುವೆನು. ನನಗೆ ಒಂದು ಭೂತಕಾಲವಿತ್ತು. ಆತ್ಮ ಸೃಷ್ಟಿಯಾಗಲಿಲ್ಲ. ಸೃಷ್ಟಿಯೆಂದರೆ ಸಂಯೋಗ, ಅಂದರೆ, ಎಂದಾದರೂ ಮುಂದೆ ಒಂದು ದಿನ ನಾಶವಾಗಲೇ ಬೇಕು. ಕೆಲವರು ಸುಖದಲ್ಲಿ ಹುಟ್ಟುವರು. ಮನೋಹರವಾದ ಅಂಗಸೌಂದರ್ಯ ಮತ್ತು ಮಾನಸಿಕ ಶಕ್ತಿಯೊಂದಿಗೆ ಸುದೀರ್ಘಕಾಲ ಆರೋಗ್ಯವನ್ನು ಅನುಭವಿಸುವರು. ಅವರ ಬಯಕೆಗಳೆಲ್ಲ ಈಡೇರುತ್ತವೆ. ಕೆಲವರು ದುಃಖದಲ್ಲಿ ಹುಟ್ಟುವರು. ಕೆಲವರಿಗೆ ಕೈಕಾಲುಗಳೇ ಇರುವುದಿಲ್ಲ. ಕೆಲವರು ಶುದ್ಧ ಮೂರ್ಖರು. ಶೋಚನೀಯವಾದ ಸ್ಥಿತಿಯಲ್ಲಿ ಹೇಗೊ ತಮ್ಮ ದೇಹವನ್ನು ರಕ್ಷಿಸಿಕೊಳ್ಳುವರು. ಅವರೆಲ್ಲರೂ ಸೃಷ್ಟಿಸಲ್ಪಟ್ಟಿದ್ದರೆ ನ್ಯಾಯವಾದ ದಯಾಳುವಾದ ದೇವರು ಕೆಲವರನ್ನು ಸುಖದಲ್ಲಿ ಮತ್ತೆ ಕೆಲವರನ್ನು ದುಃಖದಲ್ಲಿ ಏತಕ್ಕೆ ಹುಟ್ಟಿಸಬೇಕು? ಅಥವಾ ಯಾರು ಈ

ಜನ್ಮದಲ್ಲಿ ದುಃಖದಲ್ಲಿ ಇರುವರೋ ಅವರು ಮುಂದೆ ಸುಖವನ್ನು ಅನುಭವಿಸುವರು ಎಂದರೆ ಸಮಸ್ಯೆಯು ಸ್ವಲ್ಪವೂ ಪರಿಹಾರವಾಗುವುದಿಲ್ಲ. ಪರಮ ದಯಾಳುವಾದ ಧಾರ್ಮಿಕನಾದ ದೇವರ ಆಳ್ವಿಕೆಯಲ್ಲಿರುವಾಗ ಇಲ್ಲಿ ತಾನೇ ಏತಕ್ಕೆ ಅವನು ಸಂಕಟದಲ್ಲಿ ನರಳಬೇಕು ?

ಎರಡನೆಯದಾಗಿ ಸೃಷ್ಟಿಕರ್ತನೆನಿಸಿಕೊಳ್ಳುವ ಭಗವಂತನು ಈ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಸರ್ವಶಕ್ತನಾದ ಒಬ್ಬನ ನಿರ್ದಯವಾದ ಆಜ್ಞೆಯನ್ನು ಇದು ವ್ಯಕ್ತಪಡಿಸುವುದು. ಹಾಗಾದರೆ ಮಾನವನು ಹುಟ್ಟುವುದಕ್ಕೆ ಮುಂಚೆ ಅವನನ್ನು ಸುಖಿಯನ್ನಾಗಿಯೋ ದುಃಖಿಯನ್ನಾಗಿಯೊ, ಮಾಡಬೇಕಾದರೆ ಕಾರಣಗಳು ಇರಲೇಬೇಕು. ಅವೇ ಅವನ ಪೂರ್ವಕರ್ಮಗಳು.

ಆನುವಂಶಿಕವಾಗಿ ಬಂದ ನಮ್ಮ ಸ್ವಭಾವವೇ ಮನಸ್ಸಿನ ಮತ್ತು ದೇಹದ ಧರ್ಮಗಳನ್ನೆಲ್ಲ ವಿವರಿಸಲಾರದೆ? ಇಲ್ಲಿ ಎರಡು ಸಮಾನಾಂತರದಲ್ಲಿರುವ ಅಸ್ತಿತ್ವವಿದೆ. ಒಂದು ಮನಸ್ಸು ಮತ್ತೊಂದು ಭೌತಿಕ. ನಾವು ಈಗ ಇರುವ ವಿಕಾರಗಳನ್ನು ಭೌತಿಕ ಮತ್ತು ಅದರ ವಿಕಾರಗಳೇ ವಿವರಿಸುವ ಹಾಗಿದ್ದರೆ ಆತ್ಮನೊಬ್ಬನಿರುವನು ಎಂದು ಊಹಿಸುವ ಆವಶ್ಯಕತೆ ಇರುವುದಿಲ್ಲ. ಆದರೆ ಮನಸ್ಸು ಅಚೇತನ ವಸ್ತುವಿನಿಂದ ಬಂದಿದೆ ಎಂದು ಸಿದ್ಧಾಂತಪಡಿಸುವುದಕ್ಕೆ ಆಗುವುದಿಲ್ಲ. ತಾತ್ತ್ವಿಕ ದೃಷ್ಟಿಯಿಂದ ಐಕ್ಯತೆ ಅನಿವಾರ್ಯವಾದರೆ ಆಧ್ಯಾತ್ಮಿಕ ಐಕ್ಯತೆ ನಿಜವಾಗಿಯೂ ಯುಕ್ತಿಪೂರ್ವಕವಾಗಿದೆ, ಮತ್ತು ಭೌತಿಕ ಐಕ್ಯತೆಗಿಂತ ಅದೇನು ಕಡಿಮೆ ಆದರಣೀಯವಾಗಿಲ್ಲ. ಆದರೆ ಇವೆರಡೂ ಇಲ್ಲಿ ಅವಶ್ಯಕವಿಲ್ಲ.

ತಂದೆತಾಯಿಗಳ ಮೂಲಕ ದೇಹವು ಕೆಲವು ಸ್ವಭಾವವನ್ನು ಪಡೆಯುತ್ತದೆ ಎಂಬುದನ್ನು ನಾವು ಅಲ್ಲಗಳೆಯುವುದಿಲ್ಲ. ಸ್ವಭಾವ ಎಂದರೆ ಒಂದು ವಿಧದ ಶಾರೀರಕ ರಚನೆ. ಇವುಗಳ ಮೂಲಕವಾಗಿ ಮನಸ್ಸು ಯಾವುದೋ ಒಂದು ರೀತಿಯಲ್ಲಿ ವರ್ತಿಸುತ್ತದೆ ಎಂದು ಅರ್ಥ. ಜೀವನಿಗೆ ಸಂಬಂಧಿಸಿದ ಕೆಲವು ಧರ್ಮಗಳು ಅದರ ಪೂರ್ವಕರ್ಮದಿಂದ ಬಂದವು. ಯಾವುದೋ ಸ್ವಭಾವದ ಮನಸ್ಸು ಅದರ ಸ್ವಭಾವವನ್ನು ವ್ಯಕ್ತಪಡಿಸುವುದಕ್ಕೆ ಸರಿಯಾದ ದೇಹದಲ್ಲಿ ಜನ್ಮತಾಳುವುದು. ಇದು ವೈಜ್ಞಾನಿಕ ರೀತಿ. ವಿಜ್ಞಾನವು ಪ್ರತಿಯೊಂದನ್ನು ನಡತೆಯ ಮೂಲಕ ವಿವರಿಸಲು ಯತ್ನಿಸುವುದು. ನಡತೆ ಪುನಃ ಪುನಃ ಮಾಡಿದ ಕಾರ್ಯದ ಪರಿಣಾಮ. ಆದಕಾರಣ ಹೊಸದಾಗಿ ಹುಟ್ಟಿದ ಜೀವನ ಸ್ವಾಭಾವಿಕ ನಡತೆಯನ್ನು

ವಿವರಿಸಬೇಕಾದರೆ ಕ್ರಿಯೆ ಆವಶ್ಯಕ. ಅವಕ್ಕೆ ಈ ಜನ್ಮದಲ್ಲಿ ಸಾಧ್ಯವಿಲ್ಲದೇ ಇದ್ದುದರಿಂದ ಅವು ಹಿಂದಿನ ಜನ್ಮದಿಂದ ಬಂದಿರಬೇಕು.

ಇನ್ನೊಂದು ಸಲಹೆ ಇದೆ. ಇವನ್ನೆಲ್ಲ ನಾನು ಒಪ್ಪಿಕೊಂಡರೂ ನನ್ನ ಹಿಂದಿನ ಜನ್ಮವನ್ನು ನಾನು ಏತಕ್ಕೆ ಜ್ಞಾಪಕದಲ್ಲಿ ಇಟ್ಟುಕೊಂಡಿಲ್ಲ? ಇದಕ್ಕೆ ಸಮಾಧಾನವನ್ನು ಕೊಡುವುದು ಸುಲಭ. ನಾನು ಈಗ ಇಂಗ್ಲೀಷನ್ನು ಮಾತನಾಡುತ್ತಿರುವೆನು. ಅದು ನನ್ನ ಮಾತೃಭಾಷೆಯಲ್ಲ. ನಿಜವಾಗಿ ನನ್ನ ಮಾತೃಭಾಷೆಯ ಯಾವ ಶಬ್ದಗಳೂ ಕೂಡ ಈಗ ನೆನಪಿನಲ್ಲಿ ಇಲ್ಲ. ಆದರೆ ಅವುಗಳನ್ನು ನಾನು ಜ್ಞಾಪಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದೊಡನೆಯೆ ಅವುಗಳೆಲ್ಲ ಓಡಿಬರುವುವು. ಅರಿವು ಎಂದರೆ ಮನಸ್ಸಾಗರದ ಕೇವಲ ಮೇಲಿನ ಭಾಗ ಎಂಬುದನ್ನು ಇದು ತೋರುವುದು. ಅದರಾಳದಲ್ಲಿ ನಮ್ಮ ಅನುಭವಗಳೆಲ್ಲವೂ ಹುದುಗಿವೆ ನಾವು ಪ್ರಯತ್ನಿಸಿದರೆ ಅವು ಮೇಲೆ ಬರುತ್ತವೆ. ನೀವು ನಿಮ್ಮ ಹಿಂದಿನ ಜನ್ಮಗಳನ್ನು ಕೂಡ ಜ್ಞಾಪಿಸಿಕೊಳ್ಳಬಹುದು.

ಇದು ಪ್ರತ್ಯಕ್ಷವಾದ ಮತ್ತು ಇನ್ನೊಬ್ಬರಿಗೆ ತೋರಿಸಿಕೊಡಬಹುದಾದಂತಹ ಪ್ರಮಾಣ. ರುಜುವಾತು ಮಾಡಿಕೊಡುವುದೆ ಸಿದ್ಧಾಂತದ ಸತ್ಯಕ್ಕೆ ಪ್ರಮಾಣ. ಋಷಿಗಳು ಜಗತ್ತಿಗೆ ಒಂದು ಸಿದ್ಧಾಂತವನ್ನು ಕೊಟ್ಟಿರುವರು. ಅರಿವಿನ ಸಾಗರದ ಆಳವನ್ನೆಲ್ಲಾ ಕಲಕಬಹುದಾದಂತಹ ಒಂದು ರಹಸ್ಯವನ್ನು ನಾವು ಕಂಡುಹಿಡಿದಿರುವೆವು—ಸಾಧನೆಮಾಡಿದರೆ ನಿಮ್ಮ ಪೂರ್ವಜನ್ಮವೆಲ್ಲಾ ಸಂಪೂರ್ಣವಾಗಿ ಜ್ಞಾಪಕಕ್ಕೆ ಬರುವುದು.

ಆದಕಾರಣವೇ ಹಿಂದು ತಾನೊಬ್ಬ ಆತ್ಮನೆಂದು ತಿಳಿಯುತ್ತಾನೆ. ಅದನ್ನು ಕತ್ತಿ ಛೇದಿಸಲಾರದು, ಬೆಂಕಿ ಸುಡಲಾರದು, ನೀರು ಕರಗಿಸಲಾರದು, ಗಾಳಿ ಒಣಗಿಸಲಾರದು. ಪ್ರತಿಯೊಬ್ಬ ಹಿಂದು ಆತ್ಮವೆಂದರೆ ಎಲ್ಲೂ ಸುತ್ತಳತೆಯಿಲ್ಲದ ಒಂದು ವೃತ್ತವೆಂದೂ ಅದರ ಕೇಂದ್ರ ಮಾತ್ರ ದೇಹದಲ್ಲಿರುವುದೆಂದು ನಂಬುವನು. ಸಾವು ಎಂದರೆ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಈ ಕೇಂದ್ರದ ಬದಲಾವಣೆ. ಪ್ರಕೃತಿಯ ಸ್ವಭಾವದಿಂದ ಆತ್ಮನು ಬಂಧಿತನಲ್ಲ. ಅದರ ನಿಜವಾದ ಸಾರದ ದೃಷ್ಟಿಯಿಂದ ಅದು ಸ್ವತಂತ್ರ, ಬಂಧನದಿಂದ ದೂರವಾದುದು, ಪವಿತ್ರವಾದುದು, ಶುದ್ಧವಾದುದು, ಪೂರ್ಣವಾದುದು. ಅಂತೂ ಹೇಗೋ ಪ್ರಕೃತಿಯ ಬಂಧನಕ್ಕೆ ಸಿಕ್ಕಿರುವಂತೆ ಕಂಡು ತಾನೂ ಪ್ರಕೃತಿಯೆಂದು ತಿಳಿಯುವುದು.

ಸ್ವತಂತ್ರವಾಗಿ, ಪರಿಪೂರ್ಣವಾಗಿ, ಪರಿಶುದ್ಧನಾಗಿರುವ ಆತ್ಮನು

ಪ್ರಕೃತಿಯ ಬಂಧನದಲ್ಲಿ ಏತಕ್ಕೆ ಇರಬೇಕೆಂಬುದೆ ಮುಂದಿನ ಪ್ರಶ್ನೆ. ಪರಿಪೂರ್ಣನಾದ ಆತ್ಮನು ತಾನು ಅಪರಿಪೂರ್ಣನೆಂದು ಹೇಗೆ ಮೋಸ ಹೋಗುವನು? ಹಿಂದುಗಳು ಈ ಪ್ರಶ್ನೆಯನ್ನು ಎದುರಿಸಲಾರರು. ಇಂತಹ ಒಂದು ಪ್ರಶ್ನೆಯೆ ಅಲ್ಲಿ ಇಲ್ಲ ಎಂದು ಹೇಳುತ್ತಾರೆ. ಮತ್ತೆ ಕೆಲವು ತತ್ತ್ವಜ್ಞರು ಒಬ್ಬನೊ ಅಥವಾ ಅವನಿಗಿಂತ ಹೆಚ್ಚಾಗಿ ಪರಿಪೂರ್ಣರಾದವರು ಇರುವರು ಎಂದು ಊಹಿಸಿ ಅದಕ್ಕೆ ದೊಡ್ಡದೊಡ್ಡ ವೈಜ್ಞಾನಿಕ ಹೆಸರುಗಳನ್ನು ಕೊಟ್ಟು ಈ ಅಂತರವನ್ನು ಸೇರಿಸಲು ಯತ್ನಿಸುವರು. ಆದರೆ ಸುಮ್ಮನೆ ಹೆಸರು ಕೊಟ್ಟರೆ ವಿವರಿಸಿದಂತೆ ಆಗುವುದಿಲ್ಲ. ಪ್ರಶ್ನೆ ಹೇಗಾದರೂ ಇದ್ದೇ ಇರುವುದು. ಪೂರ್ಣನಾಗಿರುವವನು ಅಪರಿಪೂರ್ಣನು ಹೇಗೆ ಆಗುತ್ತಾನೆ? ಪರಿಶುದ್ಧವಾದ, ಅದ್ವೈತವಾದ ಆತ್ಮನು ತನ್ನ ಸ್ವಭಾವದಿಂದ ಕಿಂಚಿತ್ತಾದರೂ ಹೇಗೆ ಬದಲಾಯಿಸಬಹುದು? ಆದರೆ ಹಿಂದುಗಳು ಯಥಾರ್ಥವಾದಿಗಳು. ವಿತಂಡದ ಹಿಂದೆ ಅವನು ಅವಿತುಕೊಳ್ಳಲು ಇಚ್ಛಿಸುವುದಿಲ್ಲ. ಪ್ರಶ್ನೆಯನ್ನು ಧೈರ್ಯವಾಗಿ ಎದುರಿಸಬಲ್ಲ. ಅವನ ಉತ್ತರವೇ ಇದು. "ನನಗೆ ಗೊತ್ತಿಲ್ಲ. ಪರಿಪೂರ್ಣಾತ್ಮನು ಪ್ರಕೃತಿಯೊಂದಿಗೆ ಸೇರಿ ಅದರ ಪ್ರಭಾವಕ್ಕೆ ಒಳಗಾಗಿರುವೆನೆಂದು ಹೇಗೆ ಅದು ತಿಳಿದುಕೊಂಡಿತೊ ಅದು ತಿಳಿಯದು." ಆದರೂ ನಿಜಾಂಶ ವಾಸ್ತವಿಕವಾಗಿದೆ. ಪ್ರತಿಯೊಬ್ಬನೂ ಕೂಡ ತಾನು ದೇಹವೆಂದು ಭಾವಿಸುತ್ತಾನೆ. ತಾನು ದೇಹವೆಂದು ಒಬ್ಬನು ಏತಕ್ಕೆ ತಿಳಿಯುತ್ತಾನೆ ಎಂಬುದನ್ನು ವಿಚಾರಿಸುವುದಕ್ಕೆ ಹೋಗುವುದಿಲ್ಲ. ಇದು ದೇವರ ಇಚ್ಛೆ ಎನ್ನುವ ಸಮಾಧಾನ ಒಂದು ವಿವರಣೆಯಲ್ಲ. ಹಿಂದೂಗಳು "ನನಗೇನೂ ಗೊತ್ತಿಲ್ಲ" ಎಂದು ಹೇಳುವುದಕ್ಕಿಂತ ಇದು ಹೆಚ್ಚಿನದೇನೂ ಅಲ್ಲ.

ಆಗಲಿ ಹಾಗಾದರೆ ಮಾನವನ ಆತ್ಮ ಆದಿ ಅಂತ್ಯರಹಿತ, ಅಮೃತಮಯ, ಅನಂತ ಆಗಿದೆ. ಸಾವೆಂದರೆ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಕೇಂದ್ರದ ಬದಲಾವಣೆಯಷ್ಟೆ. ವರ್ತಮಾನಕಾಲವು ನಮ್ಮ ಭೂತಕಾಲದಿಂದ ನಿರ್ಧರಿಸಲ್ಪಟ್ಟಿದೆ. ಭವಿಷ್ಯ ಈಗಿನ ವರ್ತಮಾನದ ಮೇಲೆ ನಿಂತಿದೆ. ಆತ್ಮನು ಜನನ ಮರಣಗಳು ಕಳೆದಂತೆಲ್ಲಾ ಮುಂದೆ ಮುಂದಕ್ಕೆ ವಿಕಾಸನಾಗುತ್ತಲೋ ಅಥವಾ ಹಿಂದೆ ಹಿಂದಕ್ಕೆ ಕುಗ್ಗುತ್ತಲೋ ಹೋಗುವನು. ಆದರೆ ಇಲ್ಲಿ ಇನ್ನೊಂದು ಪ್ರಶ್ನೆ ಏಳುವುದು. ಮಾನವನು ಬಿರುಗಾಳಿಯಲ್ಲಿ ಸಿಕ್ಕಿರುವ ಒಂದು ಸಣ್ಣ ದೋಣಿಯೆ? ಒಂದು ಸಾರಿ

ನೊರೆಯಿಂದ ಕೂಡಿದ ದೊಡ್ಡ ಅಲೆಯು ನೆತ್ತಿಯಮೇಲೇರಿ ಮರುಕ್ಷಣವೆ ಪಾತಾಳಕ್ಕೆ ಎಸೆಯಲ್ಪಡುವನೇ? ಒಳ್ಳೆಯ ಮತ್ತು ಕೆಟ್ಟ ಕರ್ಮಗಳ ತಾಡನಕ್ಕೆ ಸಿಕ್ಕಿ ಅತ್ತ ಇತ್ತ ಅಲೆಯುತ್ತಿರುವನೆ? ಅನವರತವೂ ಘರ್ಜಿಸುತ್ತಿರುವ ಪ್ರವಹಿಸುತ್ತಿರುವ ಎಂದಿಗೂ ಸಮಾಧಾನವಿಲ್ಲದ ಕಾರ್ಯಕಾರಣಗಳೆಂಬ ಪ್ರಚಂಡ ತರಂಗಭಂಗದಲ್ಲಿ ಸಿಕ್ಕಿದ ಶಕ್ತಿಹೀನವಾದ ದಿಕ್ಕಿಲ್ಲದ ಒಂದು ಹಾಳಾದ ದೋಣಿಯೆ? ವಿಧವೆಯರ ಕಂಬನಿಗೆ ಕರಗದೆ, ತಬ್ಬಲಿಗಳ ಗೋಳಿಗೆ ಮರುಗದೆ. ತನ್ನ ದಾರಿಯಲ್ಲಿ ಸಿಕ್ಕಿದುದನ್ನೆಲ್ಲಾ ಉರುಳಿಸುತ್ತಿರುವ ಕಾರ್ಯಕಾರಣಗಳೆಂಬ ಮಹಾಚಕ್ರದ ಕೆಳಗೆ ಇರುವ ಒಂದು ಕೀಟವೆ ಮಾನವ? ಇದನ್ನು ಯೋಚಿಸಿದರೆ ನಮ್ಮ ಹೃದಯ ತಲ್ಲಳಿಸುವುದು. ಆದರೂ ಇದು ಪ್ರಕೃತಿಯ ನಿಯಮ. ಹಾಗಾದರೆ ನೆಚ್ಚಿಗೆ ಇಲ್ಲವೆ? ಇದರಿಂದ ಬಿಡುಗಡೆ ಇಲ್ಲವೆ? ನಿರಾಶಾ ಹೃದಯದಾಳದಿಂದ ಬಂದ ಆರ್ತನಾದಗಳು ಇವು. ಇವು ಕರುಣಾಮಯನ ಪೀಠವನ್ನು ಮುಟ್ಟಿತು. ಧೈರ್ಯ ಮತ್ತು ಸಮಾಧಾನವನ್ನು ಕೊಡುವ ನುಡಿಗಳು ಉಪನಿಷತ್ತಿನ ಋಷಿಯೊಬ್ಬನನ್ನು ಸ್ಫೂರ್ತಿಗೊಳಿಸಿತು. ಅವನು ಜಗತ್ತಿನ ಎದುರಿಗೆ ನಿಂತು ಜಯಘೋಷದಿಂದ ಈ ಆನಂದದ ಸುದ್ದಿಯನ್ನು ಸಾರಿದನು. "ಅಮೃತಪುತ್ರರೇ ಕೇಳಿ; ಸ್ವರ್ಗಧಾಮದಲ್ಲಿರುವವರು ಕೂಡ ಕೇಳಿ. ಮೋಹದಾಚೆ, ಅಜ್ಞಾನದಾಚೆ ಇರುವ ಸನಾತನ ವ್ಯಕ್ತಿಯನ್ನು ನಾನು ಕಂಡಿರುವೆನು. ಅವನನ್ನು ಸಾಕ್ಷಾತ್ಕಾರ ಮಾಡಿಕೊಂಡರೆ ಮಾತ್ರ ನೀವು ಸಾವಿನಿಂದ ಪಾರಾಗಬಹುದು." "ಅಮೃತಪುತ್ರರೇ!" ಎಷ್ಟು ಮಧುರವಾದ ಧೈರ್ಯವನ್ನು ಕೊಡುವ ಹೆಸರು! ಸಹೋದರರೆ, ಅಮೃತಪುತ್ರರು ಎಂಬ ಮಧುರವಾಣಿಯಿಂದ ನಿಮ್ಮನ್ನು ಸಂಬೋಧಿಸುವುದಕ್ಕೆ ಅನುಮತಿಯನ್ನು ಕೊಡಿ. ನೋಡಿ, ಹಿಂದುಗಳು ನಿಮ್ಮನ್ನು ಪಾಪಿ ಎಂದು ಕರೆಯುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ನಾವು ಭಗವಂತನ ಮಕ್ಕಳು. ಅಮೃತಾನಂದ ಭಾಗಿಗಳು: ಪರಿಶುದ್ಧಾತ್ಮರು ನಾವು, ಪರಿಪೂರ್ಣರು ನಾವು. ನೀವೆಲ್ಲರೂ ಜಗದ ಪವಿತ್ರಾತ್ಮರು. ಪಾಪಿಗಳು! ಮಾನವನನ್ನು ಹಾಗೆ ಕರೆಯುವುದೆ ಒಂದು ಘೋರ ಪಾತಕ. ಮಾನವನ ಸ್ವಭಾವದಲ್ಲಿರುವ ಒಂದು ದೊಡ್ಡ ಕಳಂಕ. ಹೇ ಕೇಸರಿಗಳೆ ಬನ್ನಿ. ನೀವು ಕುರಿಗಳು ಎಂಬ ಭ್ರಾಂತಿಯನ್ನು ಕೊಡಹಿ. ಅಮೃತಾತ್ಮರು ನೀವು, ಮುಕ್ತಾತ್ಮರು ನೀವು, ಆನಂದಮಯರು ನೀವು, ನಿತ್ಯಾತ್ಮರು ನೀವು. ನೀವು ಪ್ರಕೃತಿಯಲ್ಲ; ನೀವು ದೇಹವಲ್ಲ. ಪ್ರಕೃತಿ ನಿಮ್ಮ ಸೇವಕ. ನೀವು ಪ್ರಕೃತಿಯ ಸೇವಕರಲ್ಲ.

ಆದಕಾರಣವೆ ವೇದ, ಎಂದಿಗೂ ಅಕ್ಷಮ್ಯ ಭಯಾನಕ ಪ್ರಕೃತಿ ನಿಯಮಗಳ ಸಂಯೋಗವನ್ನು ಸಾರುವುದಿಲ್ಲ. ಕಾರ್ಯಕಾರಣಗಳ ಕೊನೆ ಮೊದಲಿಲ್ಲದ ಒಂದು ಸೆರೆಮನೆಯನ್ನು ಸಾರುವುದಿಲ್ಲ. ಈ ಪ್ರಕೃತಿ ನಿಯಮಗಳನ್ನೆಲ್ಲ ಮೆಟ್ಟಿ ನಿಂತು, ಪ್ರತಿಯೊಂದು ಕಣ ಮತ್ತು ಪ್ರತಿಯೊಂದು ಶಕ್ತಿತರಂಗದ ಅಂತರಾಳದಲ್ಲೆಲ್ಲಾ ಒಂದು ಮಹಾವ್ಯಕ್ತಿ ಇರುವನು. "ಅವನಾಜ್ಞೆಯಿಂದ ಗಾಳಿ ಬೀಸುವುದು, ಬೆಂಕಿ ಉರಿಯುವುದು, ಮೋಡಗಳು ಮಳೆಗರೆಯುವುವು, ಮೃತ್ಯು ತನ್ನ ಕಾರ್ಯವನ್ನು ಮಾಡುವುದು."

ಅವನ ಸ್ವಭಾವವೆಂತಹುದು?

ಸರ್ವಾಂತರ್ಯಾಮಿಯವನು, ಪರಿಶುದ್ಧನು, ನಿರಾಕಾರನು, ಸರ್ವಶಕ್ತನು ಮತ್ತು ದಯಾಸಿಂಧು. "ನೀನು ನಮ್ಮ ತಂದೆ, ನೀನೇ ನಮ್ಮ ತಾಯಿ, ನೀನೆ ನಮ್ಮ ಪ್ರಿಯತಮನಾದ ಸ್ನೇಹಿತ; ನೀನೇ ಎಲ್ಲಾ ಶಕ್ತಿಗಳ ಮೂಲ; ಶಕ್ತಿಯನ್ನು ನೀಡು ನಮಗೆ. ಜಗದ ಭಾರವನ್ನು ಹೊರುವವನು ನೀನು, ಈ ಜೀವನದ ಸಣ್ಣ ಹೊರೆಯನ್ನು ಹೊರುವುದಕ್ಕೆ ಸಹಾಯಮಾಡು" ವೇದದ ಋಷಿಗಳು ಹಾಡಿದುದು ಹೀಗೆ. ಅವನನ್ನು ಪೂಜಿಸುವುದು ಹೇಗೆ? ಪ್ರೀತಿಯ ಮೂಲಕ. "ಈ ಜೀವನದಲ್ಲಿ ಮತ್ತು ಮುಂದಿನ ಜೀವನದಲ್ಲಿ ಸಿಕ್ಕುವ ಎಲ್ಲಾ ವಸ್ತುಗಳಿಗಿಂತಲೂ ಪ್ರಿಯತಮನು ಅವನು ಎಂದು ತಿಳಿದು ಪೂಜಿಸಬೇಕು."

ವೇದಗಳಲ್ಲಿ ಹೇಳಿರುವ ಪ್ರೀತಿಯ ಸಿದ್ಧಾಂತವಿದು. ಹಿಂದೂಗಳು ಅವತಾರವೆಂದು ಭಾವಿಸುವ ಶ್ರೀ ಕೃಷ್ಣನು ಅದನ್ನು ಹೇಗೆ ಪರಿಪುಷ್ಟಿಗೊಳಿಸಿ ಬೋಧಿಸಿದನು ಎಂಬುದನ್ನು ನೋಡೋಣ.

ಅವನ ಬೋಧನೆ ಇದು: "ಮಾನವನು ಪದ್ಮಪತ್ರದಂತೆ ಜಗತ್ತಿನಲ್ಲಿ ಇರಬೇಕು. ಅದು ನೀರಿನಲ್ಲಿ ಬೆಳೆಯುವುದು. ಆದರೆ ಅದು ನೀರಿನಿಂದ ಒದ್ದೆಯಾಗುವುದಿಲ್ಲ. ಅದರಂತೆಯೇ ಮಾನವನು ಸಂಸಾರದಲ್ಲಿರಬೇಕು. ಅವನ ಹೃದಯ ಪರಮಾತ್ಮನಲ್ಲಿರಬೇಕು. ಕೈಗಳು ಕೆಲಸದಲ್ಲಿ ನಿರತವಾಗಿರಬೇಕು."

ಈ ಜನ್ಮದಲ್ಲಿಯೋ ಅಥವಾ ಬರುವ ಜನ್ಮದಲ್ಲಿಯೋ ದೊರಕುವ ಬಹುಮಾನದ ನೆಚ್ಚಿಕೆಗಾಗಿ ದೇವರನ್ನು ಪ್ರೀತಿಸುವುದು ಒಳ್ಳೆಯದು. ಆದರೆ ದೇವರನ್ನು ಪ್ರೀತಿಗೋಸುಗವಾಗಿ ಪ್ರೀತಿಸುವುದು ಉತ್ತಮ. ಇದು ಅವನ ಪ್ರಾರ್ಥನೆ: "ಹೇ ಜಗದೀಶ್ವರ ನನಗೆ ದ್ರವ್ಯಬೇಡ,

ಮಕ್ಕಳು ಬೇಡ, ಪಾಂಡಿತ್ಯಬೇಡ, ನಿನ್ನ ಇಚ್ಛೆಯಾದರೆ ನಾನು ಜನ್ಮ ಜನ್ಮಾಂತರವೂ ಬರುವೆನು; ಆದರೆ ಇದನ್ನು ಮಾತ್ರ ದಯಪಾಲಿಸು. ಬಹುಮಾನದ ಆಸೆಯಿಲ್ಲದೆ ನಿಸ್ವಾರ್ಥದಿಂದ ಪ್ರೇಮಕ್ಕೋಸುಗವಾಗಿ ನಿನ್ನನ್ನು ಪ್ರೀತಿಸುವುದನ್ನು ಅನುಗ್ರಹಿಸು." ಅಂದಿನ ಭರತಖಂಡದ ಚಕ್ರವರ್ತಿಯಾದ ಶ್ರೀ ಕೃಷ್ಣನ ಶಿಷ್ಯನೊಬ್ಬನು ತನ್ನ ರಾಜ್ಯದಿಂದ ವೈರಿಗಳಿಂದ ಓಡಿಸಲ್ಪಟ್ಟನು. ಹಿಮಾಲಯದ ತಪ್ಪಲಿನ ಒಂದು ಅರಣ್ಯದಲ್ಲಿ ಅವನು ತನ್ನ ರಾಣಿ ಸಹಿತ ವಾಸಮಾಡಬೇಕಾಯಿತು. ಅಲ್ಲಿ ಒಂದು ದಿನ ರಾಣಿಯು, ಮಾನವರಲ್ಲಿ ಇಂತಹ ದೊಡ್ಡ ಧರ್ಮಿಷ್ಟನು ಕೂಡ ಇಷ್ಟೊಂದು ಕಷ್ಟವನ್ನು ಅನುಭವಿಸಬೇಕೆ ಎಂದು ಕೇಳಿದಳು. ಅದಕ್ಕೆ ಯುಧಿಷ್ಠಿರನು, "ಎನ್ನರಸಿ, ಹಿಮಾಲಯವನ್ನು ನೋಡು, ಎಷ್ಟು ಸುಂದರವಾಗಿ ಭವ್ಯವಾಗಿದೆ. ನಾನು ಅವುಗಳನ್ನು ಪ್ರೀತಿಸುತ್ತೇನೆ. ನನಗೆ ಅವುಗಳು ಏನನ್ನೂ ಕೊಡುವುದಿಲ್ಲ. ಆದರೆ ಸುಂದರವಾಗಿರುವುದನ್ನು ಭವ್ಯವಾಗಿರುವುದನ್ನು ಪ್ರೀತಿಸುವುದು ನನ್ನ ಸ್ವಭಾವ. ಅದಕ್ಕೇ ನಾನು ಅವುಗಳನ್ನು ಪ್ರೀತಿಸುವುದು. ಇದರಂತೆಯೇ ನಾನು ದೇವರನ್ನು ಪ್ರೀತಿಸುತ್ತೇನೆ. ಎಲ್ಲಾ ವಿಧದ ಸೌಂದರ್ಯಕ್ಕೆ ಭವ್ಯತೆಗೆ ಮೂಲ ಅವನು. ಅವನೊಬ್ಬನೇ ಪ್ರೀತಿಸಲ್ಪಡಬೇಕಾದ ವಸ್ತು. ಅವನನ್ನು ಪ್ರೀತಿಸುವುದೇ ನನ್ನ ಸ್ವಭಾವ. ಅದಕ್ಕೇ ನಾನು ಅವನನ್ನು ಪ್ರೀತಿಸುವುದು. ನಾನು ಮತ್ತಾವುದನ್ನೂ ಪ್ರೀತಿಸುವುದಿಲ್ಲ. ನಾನು ಮತ್ತೇನನ್ನೂ ಕೇಳುವುದಿಲ್ಲ. ಅವನ ಇಚ್ಛೆ ಬಂದ ಕಡೆ ನನ್ನನ್ನು ಇಡಲಿ ಪ್ರೇಮಕ್ಕೋಸುಗವಾಗಿ ನಾನು ಅವನನ್ನು ಪ್ರೀತಿಸಬೇಕು. ಪ್ರೀತಿಯಲ್ಲಿ ನಾನು ವ್ಯಾಪಾರ ಮಾಡಲಾರೆ" ಎಂದನು.

ಜೀವಿ ಪವಿತ್ರಾತ್ಮ, ಆದರೆ ಪ್ರಕೃತಿ ಬಂಧನದಲ್ಲಿ ಸಿಕ್ಕಿದೆ. ಈ ಬಂಧನ ಜಾರಿದಾಗ ಪೂರ್ಣತೆ ಸಿಕ್ಕುವುದು. ಇದನ್ನೇ ಅವರು ಮುಕ್ತಿ ಅಥವಾ ಬಿಡುಗಡೆ ಎನ್ನುವುದು. ಅಪೂರ್ಣತೆಯಿಂದ ಬಿಡುಗಡೆ; ಸಾವಿನಿಂದ ಬಿಡುಗಡೆ; ದುಃಖದಿಂದ ಬಿಡುಗಡೆ.

ದೇವರ ದಯೆಯಿಂದ ಮಾತ್ರ ಅವನ ಬಂಧನ ಜಾರುವುದು. ಭಗವಂತನ ಅನುಗ್ರಹ ಪರಿಶುದ್ಧಾತ್ಮರಿಗೆ ದೊರಕುವುದು. ಅವನ ದಯೆ ಬೇಕಾದರೆ ಪರಿಶುದ್ಧತೆ ಬೇಕು. ಅವನ ದಯೆ ಹೇಗೆ ಫಲಕಾರಿಯಾಗುವುದು? ಪರಿಶುದ್ಧಾತ್ಮರಿಗೆ ಅವನು ಕಾಣಿಸಿಕೊಳ್ಳುವನು. ಪರಿಶುದ್ಧಾತ್ಮರು, ಪಾಪದಿಂದ ಪಾರಾದವರು, ದೇವರನ್ನು ನೋಡುವರು. ಆಗ ಮಾತ್ರ

ಹೃದಯದ ವಕ್ರತೆಗಳು ನೇರವಾಗುವುವು. ಆಗ ಮಾತ್ರ ಸಂಶಯಗಳು ಮಾಯವಾಗುವುವು. ಅವನು ಇನ್ನು ಎಂದಿಗೂ ಭಯಂಕರವಾದ ಪ್ರಕೃತಿ ನಿಯಮಗಳ ಆಳ್ವಿಕೆಗೆ ಒಳಪಟ್ಟ ವಸ್ತುವಾಗುವುದಿಲ್ಲ. ಇದೇ ಹಿಂದೂ ಧರ್ಮದ ಕೇಂದ್ರ. ಇದೇ ಅದರ ಅತ್ಯಂತ ಮುಖ್ಯ ತತ್ತ್ವ. ಹಿಂದು ಕೇವಲ ಸಿದ್ಧಾಂತಗಳ ಮೇಲೆ, ಬಾಯಿಮಾತಿನ ಮೇಲೆ ಜೀವಿಸಲು ಯತ್ನಿಸುವುದಿಲ್ಲ. ಸಾಧಾರಣ ಪಂಚೇಂದ್ರಿಯಗಳನ್ನು ಮೀರಿದ ಯಾವುದಾದರೊಂದು ಅರಿವಿದ್ದರೆ ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಅವನು ಬಯಸುವನು. ಅವನಲ್ಲಿ ಜಡವಸ್ತುವಿಗೆ ಸೇರದ ಯಾವುದಾದರೂ ಆತ್ಮಸಿದ್ದರೆ, ದಯಾಪರನಾದ ಸರ್ವಾಂತರ್ಯಾಮಿ ಒಬ್ಬನಿದ್ದರೆ, ಅವನೆಡೆಗೆ ಇವನು ನೇರವಾಗಿ ಹೋಗಲು ಇಚ್ಛಿಸುವನು. ಇವನು ದೇವರನ್ನು ಕಾಣಬೇಕು. ಭಗವಂತನ ದರ್ಶನ ಮಾತ್ರ ಸಂಶಯಗಳನ್ನೆಲ್ಲ ನಿವಾರಿಸುವುದು. ದೇವರ ವಿಚಾರವಾಗಿ ಅಥವಾ ಆತ್ಮನ ವಿಚಾರವಾಗಿ ಹಿಂದು ಕೊಡುವ ಅತ್ಯುತ್ತಮವಾದ ಪ್ರಮಾಣವೆ, “ನನಗೆ ಆತ್ಮಸಾಕ್ಷಾತ್ಕಾರವಾಗಿದೆ; ನಾನು ದೇವರನ್ನು ಕಂಡಿರುವೆ” ಎಂಬುದು. ಮೋಕ್ಷಕ್ಕೆ ಇದೊಂದೇ ನಿಯಮ. ಹಿಂದೂಧರ್ಮವೆಂದರೆ ಯಾವುದಾದರೂ ಕೆಲವು ಸಿದ್ಧಾಂತಗಳನ್ನೋ ಅಥವಾ ಮೂಢನಂಬಿಕೆಗಳನ್ನೋ ನಂಬುವುದಕ್ಕೆ ಪಡುವ ಪ್ರಯತ್ನವಲ್ಲ. ಅವುಗಳನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕು. ಅದರಂತೆ ಇರಬೇಕು. ಅದರಂತೆ ಆಗಬೇಕು.

ಅನವರತ ಮುಕ್ತಾತ್ಮರಾಗುವುದು, ಪವಿತ್ರಾತ್ಮರಾಗುವುದು. ದೇವರನ್ನು ಸೇರುವುದು ಮತ್ತು ದೇವರನ್ನು ನೋಡುವುದೇ ಅವರ ಸಿದ್ಧಾಂತದ ಗುರಿ. ಹೀಗೆ ದೇವರನ್ನು ಸೇರುವುದೇ, ದೇವರನ್ನು ನೋಡುವುದೇ, ಪರಂಧಾಮದಲ್ಲಿರುವ ಭಗವಂತನಂತೆ ಪವಿತ್ರಾತ್ಮರಾಗುವುದೇ ಹಿಂದೂ ಧರ್ಮ.

ಮುಕ್ತಿಯನ್ನು ಪಡೆದ ಮೇಲೆ ಮಾನವನು ಏನಾಗುವನು? ಅನಂತಾನಂದದಲ್ಲಿ ಬಾಳುವನು. ಮಾನವನು ಪಡೆಯಬೇಕಾಗಿರುವ ಏಕಮಾತ್ರ ವಸ್ತುವಾದ ಪರಮಾತ್ಮನನ್ನು ಪಡೆದ ಮೇಲೆ ದೇವರೊಂದಿಗೆ ಅನಂತ ಪರಿಪೂರ್ಣ ಆನಂದವನ್ನು ಅನುಭವಿಸುವನು.

ಇಲ್ಲಿಯವರೆಗೆ ಹಿಂದೂಗಳೆಲ್ಲ ಒಂದೇ ಅಭಿಪ್ರಾಯದವರು. ಭರತ ಖಂಡದಲ್ಲಿರುವ ಎಲ್ಲಾ ಪಂಗಡಗಳ ಸಾಮಾನ್ಯ ಮತ ಇದು. ಆದರೆ ಪರಿಪೂರ್ಣವೆಂಬುದು ನಿರಪೇಕ್ಷವಾದುದು. ನಿರಪೇಕ್ಷವು ಎರಡುಮೂರು

ಆಗಿರಲಾರದು. ಆದಕಾರಣವೇ ಆತ್ಮನು ಪರಿಪೂರ್ಣವಾದರೆ ನಿರಪೇಕ್ಷ ವಾದವನ್ನು ಬ್ರಹ್ಮನೊಂದಿಗೆ ಒಂದಾಗಬೇಕು. ಭಗವಂತನನ್ನು ತನ್ನ ಸ್ವಭಾವದ ಪರಿಪೂರ್ಣತೆಯಂತೆಯೆ ಸತ್ಯದಂತೆಯೇ ತಿಳಿಯಬೇಕು. ನಿರಪೇಕ್ಷವಾದ ಸತ್‌ಸ್ವರೂಪನವನು, ನಿರಪೇಕ್ಷವಾದ ಚಿತ್ ಸ್ವರೂಪ ನವನು, ನಿರಪೇಕ್ಷವಾದ ಆನಂದ ಸ್ವರೂಪನವನು ಎಂದು ತಿಳಿಯಬೇಕು. ವ್ಯಕ್ತಿತ್ವವನ್ನು ಕಳೆದುಕೊಳ್ಳುವುದೆಂದರೆ ಆತ್ಮನು ಮರದಂತೆಯೂ ಕಲ್ಲಿ ನಂತೆಯೂ ಜಡವಾಗಿಬಿಡುವನೆಂದು ಪುಸ್ತಕಗಳಲ್ಲಿ ಹಲವು ವೇಳೆ ನಾವು ಓದಿರುವೆವು. ಇದು ಗಾಯವೇ ಇಲ್ಲದವನು ಗಾಯದ ಕಲೆಯನ್ನು ಮತ್ತೊಬ್ಬನಲ್ಲಿ ನೋಡಿ ಪರಿಹಾಸ್ಯ ಮಾಡಿದಂತೆ.

ಇಂತಹ ಗುಂಪಿಗೆ ಇದು ಸೇರಿದುದಲ್ಲವೆಂದು ನಿಮಗೆ ಹೇಳುತ್ತೇನೆ. ಈ ಸಣ್ಣ ದೇಹದ ಅರಿವನ್ನು ಅನುಭವಿಸುವುದೊಂದು ಆನಂದವಾದರೆ, ಎರಡು ದೇಹಗಳ ಅರಿವನ್ನು ಆನಂದಿಸುವುದು ಅದಕ್ಕಿಂತ ಹೆಚ್ಚಿನ ಸಂತೋಷವಾಗಿರಬೇಕು. ದೇಹ ಹೆಚ್ಚಿದಷ್ಟೂ ಅದರಿಂದ ಬರುವ ಆನಂದ ಹೆಚ್ಚುತ್ತಾ ಹೋಗುವುದು. ಅದು ಸರ್ವವ್ಯಾಪಿಯೆಂದು ಅರಿ ವಾದಾಗ ಗುರಿಯಾದ ಆನಂದದ ಪರಾಕಾಷ್ಠತೆಯನ್ನು ಮುಟ್ಟಿದಂತೆ.

ಆದಕಾರಣವೆ ಅನಂತವಾದ ಸರ್ವವ್ಯಾಪಿಯಾದ ವ್ಯಕ್ತಿತ್ವವನ್ನು ಪಡೆಯಬೇಕಾದರೆ ಅನಿಷ್ಟವಾದ ಬಂಧನದಲ್ಲಿ ನರಳುತ್ತಿರುವ ವ್ಯಕ್ತಿತ್ವ ತೊಲಗಬೇಕು. ನಾನು ಜೀವನದೊಂದಿಗೆ ಐಕ್ಯವಾದಾಗ ಮಾತ್ರ ದುಃಖ ತಪ್ಪುವುದು. ಇದೊಂದೆ ಯುಕ್ತಿಪೂರಿತವಾದ ಶಾಸ್ತ್ರೀಯ ತೀರ್ಮಾನ. ಶಾರೀರಕ ವ್ಯಕ್ತಿತ್ವವೆಲ್ಲ ಒಂದು ಭ್ರಾಂತಿ. ನನ್ನ ದೇಹವನ್ನು ನಿಜವಾಗಿ ನೋಡಿದರೆ ಅನವರತವೂ ವಿಕಾರವಾಗುತ್ತಿರುವ ಅಖಂಡವಾದ ಜೀವ ಕಣಗಳ ಸಾಗರದ ಒಂದು ಅಲೆ ಎಂದು ವಿಜ್ಞಾನಶಾಸ್ತ್ರ ಸಿದ್ಧಾಂತ ಮಾಡಿರುವುದು. ಆದಕಾರಣ ನನ್ನ ಇನ್ನೊಂದು ಭಾಗವಾದ ಆತ್ಮನು ಅದ್ವೈತವಾಗಿರಬೇಕೆಂಬುದು ನ್ಯಾಯವಾದ ತೀರ್ಮಾನ.

ವಿಜ್ಞಾನವೆಂದರೆ ಐಕ್ಯತೆಯನ್ನು ಕಂಡು ಹಿಡಿಯುವುದು. ವಿಜ್ಞಾನ ಪರಿಪೂರ್ಣ ಐಕ್ಯತೆಯನ್ನು ಮುಟ್ಟಿದ ಮೇಲೆ ಅದರ ಬೆಳವಣಿಗೆ ಕೊನೆ ಗಂಡಂತೆಯೆ. ಏಕೆಂದರೆ ಅದು ತನ್ನ ಗುರಿಯನ್ನು ಮುಟ್ಟುವುದು. ಆದಕಾರಣವೆ, ರಸಾಯನಶಾಸ್ತ್ರ ಉಳಿದ ಧಾತುಗಳೆಲ್ಲಾ ಯಾವ ಒಂದು ಧಾತುವಿನಿಂದ ಆಗುವುದೋ ಅದನ್ನು ಕಂಡುಹಿಡಿದ ಮೇಲೆ ಮತ್ತೆ ಮುಂದುವರಿಯುವುದಿಲ್ಲ. ಉಳಿದ ಎಲ್ಲಾ ಶಕ್ತಿಗಳೂ ಯಾವ ಒಂದು

ಶಕ್ತಿಯು ರೂಪಾಂತರವಾಗಿದೆಯೋ ಅದನ್ನು ಕಂಡುಹಿಡಿಯುವುದರಲ್ಲಿ ಜಯಶೀಲವಾದರೆ ಭೌತಿಕಶಾಸ್ತ್ರ ಅಲ್ಲಿ ನಿಲ್ಲುವುದು. ಎಂದು, ಎಲ್ಲರೂ ಮೃತ್ಯುವಶರಾಗುತ್ತಿರುವ ಈ ಜಗತ್ತಿನಲ್ಲಿ, ಯಾರು ಅಮರನಾಗಿರುವನೋ, ಅನವರತವೂ ವಿಕಾರವಾಗುತ್ತಿರುವ ಜಗತ್ತಿಗೆ ಯಾರು ಚೇತನಕಾರಿಯಂತಿರುವನೋ, ಯಾರು ಅದ್ವೈತನಾದ ಆತ್ಮನೋ, ಉಳಿದವುಗಳೆಲ್ಲ ಅವನ ತೋರಿಕೆಯೋ, ಅವನ ಆವಿರ್ಭಾವವೋ ಅದನ್ನು ಕಂಡು ಹಿಡಿದಾಗ ಧರ್ಮಶಾಸ್ತ್ರ ಪರಿಪೂರ್ಣವಾಗುವುದು. ಅನೇಕದಿಂದ, ದ್ವೈತದಿಂದ, ಪರಮಾದ್ವೈತವನ್ನು ಮುಟ್ಟುವುದು. ಧರ್ಮ ಇನ್ನು ಮುಂದಕ್ಕೆ ಹೋಗಲಾರದು. ಇದೇ ಎಲ್ಲಾ ಶಾಸ್ತ್ರಗಳ ಪರಮ ಗುರಿ.

ಎಲ್ಲಾ ಶಾಸ್ತ್ರಗಳೂ ಕೊನೆಗೆ ಈ ಸಿದ್ಧಾಂತಕ್ಕೆ ಬಂದೇ ಬರುವುವು. ಈಗಿನ ಕಾಲದಲ್ಲಿ ಸೃಷ್ಟಿಯೆಲ್ಲ ಒಂದು ವಿಕಾಸ ಎಂಬುದು ವೈಜ್ಞಾನಿಕರ ಸಿದ್ಧಾಂತ. ಯಾವುದನ್ನು ಹಿಂದು ಬಹುಕಾಲದಿಂದಲೂ ತನ್ನ ಹೃದಯದಲ್ಲಿ ಇಟ್ಟುಕೊಂಡಿದ್ದನೋ, ಅದನ್ನೇ ಮತ್ತೂ ಧೈರ್ಯವಾದ ಭಾಷೆಯಲ್ಲಿ, ವೈಜ್ಞಾನಿಕರು ಅತ್ಯಾಧುನಿಕ ಸಿದ್ಧಾಂತಗಳ ಬೆಳಕಿನ ಮೂಲಕ ಬೋಧಿಸುವರಲ್ಲ ಎಂದು ಹಿಂದೂಗೆ ಪರಮಾನಂದ.

ತತ್ತ್ವಶಾಸ್ತ್ರಗಳ ಹೆಬ್ಬಯಕೆ ಎಂಬ ಮಹೋತ್ತುಂಗ ಶಿಖರವನ್ನು ಬಿಟ್ಟು ಮೂಢರ ಧರ್ಮಕ್ಕೆ ಈಗ ಬರುವ. ಮೊದಲೇ ನಿಮಗೆ ಹೇಳುತ್ತೇನೆ, ಭರತಖಂಡದಲ್ಲಿ ಹಲವು ದೇವರುಗಳಿಲ್ಲ. ಪ್ರತಿಯೊಂದು ದೇವಸ್ಥಾನದಲ್ಲಿಯೂ ಒಬ್ಬನು ನಿಂತು ಕೇಳಿದರೆ ಭಕ್ತರೆಲ್ಲರೂ ಸರ್ವ ವ್ಯಾಪ್ತತೆಯಿಂದ ಹಿಡಿದು ಎಲ್ಲಾ ಗುಣಗಳನ್ನು ವಿಗ್ರಹಗಳಿಗೆ ಆರೋಪಿಸುವುದನ್ನು ನೋಡಬಹುದು. ಇದು ಹಲವು ದೇವರ ಆರಾಧನೆಯಲ್ಲ ಅಥವಾ ಇದನ್ನು ಏಕೇಶ್ವರ ಉಪಾಸನೆ ಎಂದು ಹೇಳಿದರೂ ಸಂಪೂರ್ಣವಾಗಿ ವಿವರಿಸಿದಂತೆ ಆಗುವುದಿಲ್ಲ. "ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದು ಮೊದಲಿನಷ್ಟೆ ಸುವಾಸನೆಯಾಗಿರುವುದು." ಹೆಸರುಗಳು ವಿವರಣೆಗಳಲ್ಲ.

ನಾನು ಹುಡುಗನಾಗಿದ್ದಾಗ ಇಂಡಿಯಾದಲ್ಲಿ ಒಬ್ಬ ಕ್ರೈಸ್ತ ಪಾದ್ರಿ ಜನರಿಗೆ ಉಪದೇಶ ಮಾಡುತ್ತಿದ್ದುದನ್ನು ಕೇಳಿದ್ದು ಜ್ಞಾಪಕವಿದೆ. ಅತನು ಹೇಳುತ್ತಿದ್ದ ಎಷ್ಟೋ ತಮಾಷೆಯ ವಿಷಯಗಳಲ್ಲಿ ಇದೊಂದು, "ತಾನು ಹಿಂದೂಗಳು ಪೂಜಿಸುತ್ತಿದ್ದ ವಿಗ್ರಹಕ್ಕೆ ತನ್ನ ಬೆತ್ತದಿಂದ ಹೊಡೆದರೆ ಅದು ಏನು ಮಾಡಬಲ್ಲುದು?" ಪ್ರೇಕ್ಷಕರಲ್ಲಿ ಒಬ್ಬನು, "ನಾನು ನಿನ್ನ ದೇವರನ್ನು ನಿಂದಿಸಿದರೆ ಅವನೇನು ಮಾಡುವನು? ಎಂದು ಕೇಳಿದನು.

ಪಾದ್ರಿ "ನೀನು ಕಾಲವಾದ ಮೇಲೆ ದೇವರು ನಿನ್ನನ್ನು ಶಿಕ್ಷಿಸುವನು" ಎಂದನು. ಹಿಂದು, "ಹಾಗೆಯೇ ನೀನು ಕಾಲವಾದ ಮೇಲೆ ನನ್ನ ವಿಗ್ರಹವೂ ನಿನ್ನನ್ನು ಶಿಕ್ಷಿಸುವುದು" ಎಂದನು.

ಗಿಡದ ಸ್ವಭಾವ ಅದರ ಹಣ್ಣಿನಿಂದ ತಿಳಿಯುವುದು. ವಿಗ್ರಹಾರಾಧಕರ ಗುಂಪಿನಲ್ಲಿ ನೀತಿ ಧರ್ಮ ಮತ್ತು ಪ್ರೀತಿಯಲ್ಲಿ, ಅವರನ್ನು ಹೋಲುವ ಮತ್ತೊಬ್ಬರನ್ನು ನಾನು ಕಾಣದೆ ಇರುವಾಗ ಮೌನವಾಗಿ "ಪಾಪದಿಂದ ಪುಣ್ಯ ಲಭಿಸುವುದೆ?" ಎಂದು ನನಗೆ ನಾನೆ ಕೇಳಿಕೊಂಡಿರುವೆನು.

ಮೂಢನಂಬಿಕೆ ಮಾನವನ ದೊಡ್ಡ ಶತ್ರು. ಆದರೆ ಸ್ವಮತ ಭ್ರಾಂತಿ ಅದಕ್ಕಿಂತಲೂ ಹೆಚ್ಚು. ಕ್ರೈಸ್ತನು ಚರ್ಚಿಗೆ ಏತಕ್ಕೆ ಹೋಗುತ್ತಾನೆ? ಶಿಲುಬೆ ಏತಕ್ಕೆ ಪವಿತ್ರ? ಪ್ರಾರ್ಥಿಸುವಾಗ ಮುಖವೇತಕ್ಕೆ ಮೇಲೆತ್ತಿರಬೇಕು? ಕ್ಯಾಥೊಲಿಕ್ ಜನರ ಚರ್ಚಿನಲ್ಲಿ ಏತಕ್ಕೆ ಅಷ್ಟೊಂದು ವಿಗ್ರಹಗಳಿವೆ? ಪ್ರಾಟೆಸ್ಟೆಂಟರು ಪ್ರಾರ್ಥಿಸುವಾಗ ಅವರ ಮನಸ್ಸಿನಲ್ಲಿ ಏತಕ್ಕೆ ಅಷ್ಟೊಂದು ಆಕಾರಗಳಿರುತ್ತವೆ? ಸಹೋದರರೆ, ನಾವು ಹೇಗೆ ಉಸಿರಾಡದೆ ಜೀವಿಸಲಾರೆವೊ ಹಾಗೆಯೆ ರೂಪುಕೊಡದೆ ಮನಸ್ಸಿನಲ್ಲಿ ಏನನ್ನೂ ಆಲೋಚಿಸಲಾರೆವು. ಪರಸ್ಪರ ಸಾಂಬಂಧಿಕ ನಿಯಮದ ಪ್ರಕಾರ ವಿಗ್ರಹವು ಮಾನಸಿಕ ವಿಗ್ರಹವನ್ನು ನೆನಪಿಗೆ ತರುತ್ತದೆ. ಆದಕಾರಣವೆ ಹಿಂದು ಪ್ರಾರ್ಥಿಸುವಾಗ ಬಾಹ್ಯಪ್ರತೀಕವನ್ನು ಉಪಯೋಗಿಸುವನು. ನಿಮ್ಮಂತೆಯೆ ಅವನಿಗೂ ಕೂಡ ವಿಗ್ರಹವೇ ದೇವರಲ್ಲವೆಂದೂ ಅದು ಸರ್ವವ್ಯಾಪಿಯಲ್ಲವೆಂದೂ ಗೊತ್ತಿದೆ. ಅದು ಹೋಗಲಿ, ಮುಕ್ಕಾಲುಪಾಲು ಜನರಿಗೆ ಸರ್ವವ್ಯಾಪಿತ್ವವೆಂದರೆ ಏನು ಗೊತ್ತಾಗುವುದು? ಅದೊಂದು ಶಬ್ದ ಮಾತ್ರ, ಸಂಕೇತ ಮಾತ್ರ. ದೇವರಿಗೆ ಏನಾದರೂ ತೋರಿಕೆಯ ಎಲ್ಲೆ ಇರುವುದೆ? ಇಲ್ಲದೆ ಇದ್ದರೆ ನಾವು ಸರ್ವವ್ಯಾಪಿತ್ವವೆಂದು ಉಚ್ಚರಿಸಿದಾಗ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ ಆಕಾಶವನ್ನೊ ಅಥವಾ ಬಯಲನ್ನೊ ಯೋಚಿಸುತ್ತೇವೆ, ಅಷ್ಟೆ.

ನಮ್ಮ ಮಾನಸಿಕ ರಚನಾ ನಿಯಮಗಳಿಗೆ ಅನುಸಾರವಾಗಿ ಅನಂತತೆ ಎಂಬ ಭಾವವನ್ನು, ನಾವು ನೀಲಿಯಾಕಾಶವೊ ಅಥವಾ ಸಾಗರವೊ ಇವುಗಳ ಮೂಲಕ ಹೊಂದಿಸಿಕೊಂಡಿರುವಂತೆಯೆ, ನಾವು ಪವಿತ್ರತೆ ಎಂಬ ಭಾವವನ್ನು ಸ್ವಾಭಾವಿಕವಾಗಿ ಚರ್ಚು, ಶಿಲುಬೆ, ಮಸೀದಿ ಎಂಬ ಆಕಾರಗಳೊಂದಿಗೆ ಹೊಂದಿಸಿಕೊಳ್ಳುತ್ತೇವೆ. ಹಿಂದೂಗಳು

ಪವಿತ್ರತೆ, ಸತ್ಯ, ಸರ್ವವ್ಯಾಪಿತ್ವ ಮುಂತಾದ ಭಾವಗಳನ್ನು ಹಲವು ಆಕಾರ ಮತ್ತು ವಿಗ್ರಹದೊಂದಿಗೆ ಹೊಂದಿಸಿಕೊಂಡಿರುವರು. ಆದರೆ ಈ ಒಂದು ವ್ಯತ್ಯಾಸ ಮಾತ್ರ ಇರುವುದು. ಕೆಲವರು ತಮ್ಮ ಇಡೀ ಜೀವನವನ್ನೇ ಚರ್ಚಿನ ವಿಗ್ರಹಕ್ಕೆ ಮೀಸಲಾಗಿಟ್ಟು ಅದನ್ನು ಮೀರಿ ಬೆಳೆಯಲಾರರು. ಏಕೆಂದರೆ ಅವರಿಗೆ ಧರ್ಮವೆಂದರೆ ಕೆಲವು ಅಭಿಪ್ರಾಯಗಳಿಗೆ ತಮ್ಮ ಸಮ್ಮತಿಯನ್ನು ಕೊಡುವುದು ಮತ್ತು ತಮ್ಮ ಮತಾನುಯಾಯಿಗರಿಗೆ ಒಳ್ಳೆಯದನ್ನು ಮಾಡುವುದು ಮಾತ್ರ. ಆದರೆ ಹಿಂದೂವಿನ ಧರ್ಮವೆಲ್ಲ ಸಾಕ್ಷಾತ್ಕಾರದಲ್ಲಿ ನೆಲಸಿದೆ. ಪವಿತ್ರತೆಯನ್ನು ಸಾಕ್ಷಾತ್ಕಾರ ಮಾಡಿಕೊಂಡು ಮಾನವನು ಉದ್ಧಾರವಾಗಬೇಕಾಗಿದೆ. ವಿಗ್ರಹ, ದೇವಸ್ಥಾನ, ಚರ್ಚು ಅಥವಾ ಧರ್ಮಗ್ರಂಥ ಇವು ಆಧ್ಯಾತ್ಮಿಕ ಶೈಶವಾವಸ್ಥೆಯ ಸಹಾಯಕ್ಕೆ ಮಾತ್ರ. ಆದರೆ ಅವನು ಇವನ್ನು ಮೀರಿ ಮುಂದುವರಿಯಬೇಕು.

ಅವನು ಎಲ್ಲಿಯೂ ನಿಲ್ಲಕೂಡದು. "ಬಾಹ್ಯಪೂಜೆ ಮತ್ತು ವಿಗ್ರಹಾರಾಧನೆ ಬಹಳ ಕೆಳಗಿನದು. ಇನ್ನೂ ಮುಂದುವರಿದರೆ ಮಾನಸಿಕ ಪೂಜೆ ಇದಕ್ಕಿಂತ ಮೇಲಿನ ತರಗತಿಯದು. ಆದರೆ ದೇವರನ್ನು ಸಾಕ್ಷಾತ್ಕಾರಮಾಡಿಕೊಂಡಾಗ ಮಾತ್ರ ಅದು ಅತ್ಯುತ್ತಮಾವಸ್ಥೆ" ಎಂದು ವೇದ ಸಾರುವುದು. ಯಾವ ಭಕ್ತನು ವಿಗ್ರಹದ ಎದುರು ಬಾಗಿ ನಮಸ್ಕರಿಸುತ್ತಿರುವನೊ ಅವನು ಹೇಳುವುದನ್ನು ಗಮನಿಸಿ. "ಅವನನ್ನು ಸೂರ್ಯ ಬೆಳಗಲಾರನು. ಮಿಂಚು ಅವನನ್ನು ವ್ಯಕ್ತಪಡಿಸಲಾರದು. ಅಥವಾ ನಾವು ಕರೆಯುವ ಅಗ್ನಿಯಾದರೂ ಅವನನ್ನು ಬೆಳಗಲಾರನು. ಇವುಗಳೆಲ್ಲಾ ಬೆಳಗುವುದು ಅವನಿಂದ." ಹಿಂದು ಮತ್ತಾರ ವಿಗ್ರಹವನ್ನು ದೂರುವುದಿಲ್ಲ. ಅವರ ಪೂಜೆಯನ್ನು ಪಾಪವೆನ್ನುವುದಿಲ್ಲ. ಇವುಗಳೆಲ್ಲಾ ಅವನು ಜೀವನದಲ್ಲಿ ಆವಶ್ಯಕವಾದ ಒಂದು ಅವಸ್ಥೆಯನ್ನು ಕಾಣುವನು. "ಮಗು ಮಾನವನ ತಂದೆ." ಬಾಲ್ಯಾವಸ್ಥೆ ಅಥವಾ ಯೌವನಾವಸ್ಥೆಯನ್ನು ಪಾಪವೆನ್ನುವುದು ವೃದ್ಧನಿಗೆ ಧರ್ಮವೆ?

ಒಬ್ಬನಿಗೆ ಪರಮಾತ್ಮ ಸಾಕ್ಷಾತ್ಕಾರ ವಿಗ್ರಹದ ಮೂಲಕವಾಗಿ ಆದರೆ ಅದನ್ನು ಪಾಪವೆನ್ನುವುದು ಧರ್ಮವೆ? ಅಥವಾ ಅವನು ಆ ಸ್ಥಿತಿಯನ್ನು ಮೀರಿಹೋದ ಮೇಲೆ ಕೂಡ ಅದನ್ನು ತಪ್ಪು ಎನ್ನ ಕೂಡದು. ಹಿಂದುವಿಗೆ ಮಾನವನು ಅಸತ್ಯದಿಂದ ಸತ್ಯಕ್ಕೆ ಪ್ರಯಾಣಮಾಡುತ್ತಿಲ್ಲ. ಕೆಳಗಿನ ಸತ್ಯದಿಂದ ಮೇಲಿನ ಸತ್ಯಕ್ಕೆ ಪ್ರಯಾಣಮಾಡುತ್ತಿರುವನು. ಅವನಿಗೆ

ಅನಾಗರಿಕ ಅತ್ಯಂತ ಕೀಳು ತರಗತಿಯ ಕಲ್ಲು ಮರ ಮುಂತಾದ ಪೂಜೆ ಗಳಿಂದ ಹಿಡಿದು, ಅತ್ಯುತ್ತಮವಾದ ಅದ್ವೈತ ಉಪಾಸನೆಯವರೆಗೆ ಇರುವುದೆಲ್ಲ, ಮಾನವನು ಅವ್ಯಕ್ತವಾದುದನ್ನು ಗ್ರಹಿಸಿ ಸಾಕ್ಷಾತ್ಕಾರಮಾಡಿ ಕೊಳ್ಳುವುದಕ್ಕೆ ಪಟ್ಟ ಹಲವು ಪ್ರಯತ್ನಗಳು. ಪ್ರತಿಯೊಂದೂ ಜನನ ಸಂಸ್ಕಾರ ಮತ್ತು ವಾತಾವರಣ ಇವುಗಳಿಂದ ನಿರ್ಧರಿಸಲ್ಪಟ್ಟಿವೆ. ಪ್ರತಿ ಯೊಂದೂ ಮುಂದುವರಿಯುವುದಕ್ಕೆ ಇರುವ ಒಂದು ಮೆಟ್ಟಲು. ಪ್ರತಿ ಯೊಂದು ಜೀವನು ಸಚ್ಚಿದಾನಂದಸ್ವರೂಪನಾದ ಪರಬ್ರಹ್ಮನೆಂಬ ಸೂರ್ಯ ನನ್ನು ಮುಟ್ಟುವ ತನಕ ಮೇಲೆಮೇಲೆ ಹಾರುತ್ತ ಹೆಚ್ಚುಹೆಚ್ಚು ಶಕ್ತಿ ಯನ್ನು ಗ್ರಹಿಸುತ್ತಿರುವ ಗರುಡನ ಮರಿಯಂತೆ.

ವೈವಿಧ್ಯತೆಯಲ್ಲಿ ಐಕ್ಯತೆಯೆ ಪ್ರಕೃತಿಯ ನಿಯಮ. ಹಿಂದು ಇವನ್ನು ತಿಳಿದುಕೊಂಡಿರುವನು. ಉಳಿದ ಧರ್ಮಗಳೆಲ್ಲ ಕೆಲವು ನಿರ್ದಿಷ್ಟ ಮೂಢನಂಬಿಕೆಗಳನ್ನು ಇಟ್ಟು ಅದನ್ನು ಸ್ವೀಕರಿಸುವಂತೆ ಸಮಾಜವನ್ನು ಬಲಾತ್ಕರಿಸುವುದು. ಸಮಾಜಕ್ಕೆ ಒಂದು ಅಳತೆಯ ಅಂಗಿಯನ್ನು ಕೊಟ್ಟು ಅದು ಜಾಕ್, ಜಾನ್, ಹೆನ್ರಿ ಮುಂತಾದವರುಗಳಿಗೆಲ್ಲ ಸರಿ ಹೋಗಬೇಕು ಎನ್ನುವುದು. ಜಾನ್ ಅಥವಾ ಹೆನ್ರಿಗೆ ಅದು ಸರಿಹೋಗ ದಿದ್ದರೆ ಅವನು ತೊಟ್ಟುಕೊಳ್ಳುವುದಕ್ಕೆ ಅಂಗಿಯಿಲ್ಲದೆ ಹೋಗಬೇಕು. ನಿರಪೇಕ್ಷ ಬ್ರಹ್ಮನನ್ನು ಸಾಕ್ಷಾತ್ಕಾರಮಾಡಿಕೊಳ್ಳುವುದಾಗಲಿ, ಆಲೋಚಿ ಸುವುದಾಗಲಿ ಅಥವಾ ಅದನ್ನು ಒಂದು ಸಿದ್ಧಾಂತವನ್ನಾಗಿ ವಿವರಿಸುವು ದಾಗಲಿ, ಮಾಡಬೇಕಾದರೆ, ಅದು ಸಾಪೇಕ್ಷದ ಮೂಲಕ ಮಾತ್ರ ಸಾಧ್ಯ ವೆಂಬುದನ್ನು ಹಿಂದು ಕಂಡುಹಿಡಿದಿರುವನು. ವಿಗ್ರಹ, ಶಿಲುಬೆ, ಅರ್ಧ ಚಂದ್ರ, ಇವು ಸಂಕೇತಗಳು. ಆಧ್ಯಾತ್ಮಿಕ ಭಾವವನ್ನು ತಗಲುಹಾಕು ವುದಕ್ಕೆ ಇರುವ ಗೂಟ. ಇದು ಪ್ರತಿಯೊಬ್ಬರಿಗೂ ಅತ್ಯಾವಶ್ಯಕವೇನೂ ಅಲ್ಲ. ಆದರೆ ಯಾರಿಗೆ ಇದು ಆವಶ್ಯಕವಿಲ್ಲವೊ ಅವರಿಗೆ ಇದು ಸರಿಯಲ್ಲ ಎಂದು ಹೇಳುವುದಕ್ಕೆ ಅಧಿಕಾರವಿಲ್ಲ. ಇದು ಹಿಂದೂ ಧರ್ಮದಲ್ಲಿ ಅತ್ಯಾವಶ್ಯವೂ ಅಲ್ಲ.

ನಾನು ನಿಮಗೆ ಒಂದು ವಿಷಯವನ್ನು ಅಗತ್ಯವಾಗಿ ಹೇಳಬೇಕಾಗಿದೆ. ಭರತಖಂಡದಲ್ಲಿ ವಿಗ್ರಹಾರಾಧನೆಯೆಂದರೆ ಅದೇನು ಅಷ್ಟು ಜಿಗುಪ್ಸೆ ಕಾರಕವಲ್ಲ. ಅದೇನು ವ್ಯಭಿಚಾರಿಗಳ ತೌರುಮನೆಯಲ್ಲ. ಯಾರ ಮನಸ್ಸು ಇನ್ನೂ ಸಾಕಾದಷ್ಟು ಅಭಿವೃದ್ಧಿಯಾಗಿಲ್ಲವೊ ಅವರು ಆಧ್ಯಾತ್ಮಿಕ ಸತ್ಯಗಳನ್ನು ಗ್ರಹಿಸುವುದಕ್ಕೆ ಮಾಡಿದ ಪ್ರಯತ್ನಗಳು ಇವು. ಹಿಂದೂ

ಗಳಲ್ಲಿಯೂ ಲೋಪದೋಷಗಳಿವೆ. ಕೆಲವು ವೇಳೆ ಅವರು ಸಾಮಾನ್ಯ ನಿಯಮಗಳಿಗೆ ಒಳಗಾಗದೆ ಇರುವುದೂ ಉಂಟು. ಆದರೆ ಇದನ್ನು ಗಮನವಲ್ಲಿಡಿ. ಅದು ಯಾವಾಗಲೂ ತಮ್ಮ ದೇಹವನ್ನು ದಂಡಿಸುವುದಕ್ಕೆ, ನೆರೆಹೊರೆಯವರ ಕುತ್ತಿಗೆಯನ್ನು ಕತ್ತರಿಸುವುದಕ್ಕೆ ಅಲ್ಲ. ಹಿಂದೂಮತಭ್ರಾಂತನು ಚಿತೆಯಮೇಲೆ ತಾನೇ ಬೆಂಕಿ ಇಟ್ಟುಕೊಂಡು ಬೆಂದರೂ, ಅವನೆಂದಿಗೂ, ಅನ್ಯಮತೀಯರನ್ನು ಜೀವಸಹಿತ ಸುಡುವುದಕ್ಕೆ ಬೆಂಕಿ ಇಡುವುದಿಲ್ಲ. ಆದರೆ ಹೇಗೆ ಮಾಟಗಾತಿಯರನ್ನು ಸುಟ್ಟದ್ದು ಕ್ರೈಸ್ತಧರ್ಮಕ್ಕೆ ಸೇರಿಲ್ಲವೊ ಹಾಗೆಯೆ ಇದನ್ನು ಕೂಡ ಹಿಂದೂಧರ್ಮದ ದೋಷವೆನ್ನಲಾಗದು.

ಆದಕಾರಣ, ಹಿಂದೂಗೆ ಧಾರ್ಮಿಕ ಪ್ರಪಂಚವೆಲ್ಲ ಒಂದು ಪ್ರಯಾಣದಂತೆ ಇರುವುದು. ಹಲವು ಸ್ತ್ರೀಪುರುಷರು ಹಲವು ವಿಧದ ಸ್ಥಿತಿಗತಿಗಳ ಮೂಲಕವಾಗಿ ಒಂದೇ ಗುರಿಯ ಸಮೀಪಕ್ಕೆ ಬರುವರು. ಪ್ರತಿಯೊಂದು ಧರ್ಮವೂ ಮಾನವನಲ್ಲಿ ದೇವನು ವಿಕಸಿಸುವಂತೆ ಮಾಡುವುದು. ಎಲ್ಲರಿಗೂ ಸ್ಫೂರ್ತಿದಾಯಕನು ಆದಿದೇವನೊಬ್ಬನೆ. ಹಾಗಾದರೆ ಇಷ್ಟೊಂದು ಅಭಿಪ್ರಾಯಗಳಿರುವುದು ಏತಕ್ಕೆ! ಇವುಗಳೆಲ್ಲ ತೋರಿಕೆ ಎನ್ನುವನು ಹಿಂದು. ಒಂದೇ ಸತ್ಯ ಬೇರೆಬೇರೆ ಸ್ವಭಾವಗಳಲ್ಲಿ ವಿಕಾಸವಾಗುತ್ತಿರುವ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವಾಗ ವಿರೋಧ ಉಂಟಾಗುವುದು.

ಅನೇಕ ಬಣ್ಣದ ಕನ್ನಡಿಯ ಮೂಲಕ ಬರುತ್ತಿರುವ ಬೆಳಕು ಒಂದೆ. ಹೊಂದಿಕೊಳ್ಳುವುದಕ್ಕಾಗಿ ಕೆಲವು ಬದಲಾವಣೆ ಅತ್ಯಾವಶ್ಯಕ. ಆದರೆ ಇವುಗಳ ಅಂತರಾಳದಲ್ಲೆಲ್ಲಾ ಇರುವುದು ಒಂದೇ ಸತ್ಯ. ಭಗವಂತನು ಶ್ರೀಕೃಷ್ಣಾವತಾರದಲ್ಲಿ ಹಿಂದೂಗೆ ಹೀಗೆ ಹೇಳಿರುವನು: "ಹಲವು ಮಣಿಗಳನ್ನು ಕೂಡಿಸುವ ಒಂದು ದಾರದಂತೆ ನಾನೆ ಎಲ್ಲಾ ಧರ್ಮಗಳಲ್ಲಿಯೂ ಇರುವುದು. ಎಲ್ಲಿ ಅಸಾಧಾರಣವಾದ ಪವಿತ್ರತೆ ಮತ್ತು ಮಹಾಶಕ್ತಿ ಉದಿಸಿ ಮಾನವ ಜನಾಂಗವನ್ನು ಪರಿಶುದ್ಧ ಮಾಡುತ್ತಿರುವುದೋ ಅಲ್ಲೆಲ್ಲಾ ನಾನೆ ಇರುವೆನು ಎಂದು ತಿಳಿ." ಇದರ ಪರಿಣಾಮ ಏನಾಯಿತು? ಹಿಂದು ಮಾತ್ರ ಮುಕ್ತಿಗೆ ಅರ್ಹ ಉಳಿದವರಲ್ಲ, ಎಂಬುದನ್ನು ಹೋಲುವ ಒಂದು ನುಡಿಯನ್ನು ಇಡೀ ಸಂಸ್ಕೃತ ತತ್ತ್ವಶಾಸ್ತ್ರ ನಿಧಿಯಲ್ಲಿ ಎಲ್ಲಿಯಾದರೂ ಹುಡುಕಿ ತೋರಿಸಿಕೊಡಲಿ ನೋಡೋಣ. "ನಮ್ಮ ವರ್ಣಾಶ್ರಮಗಳಾಚೆಯೂ ಮಹಾತ್ಮರು ಇರುವರು" ಎಂದು

ವ್ಯಾಸರು ಹೇಳಿರುವರು. ಇನ್ನೊಂದು ಮಾತು. ಯಾವ ಹಿಂದೂವಿನ ಆಲೋಚನಾ ಕ್ಷೇತ್ರವೆಲ್ಲ ದೇವರೆಂಬ ಕೇಂದ್ರದ ಮೇಲೆ ನಿಂತಿದೆಯೋ ಅವರು ಅಜ್ಞಾತವಾದಿಗಳಾದ ಬೌದ್ಧರನ್ನು ನಿರೀಶ್ವರವಾದಿಗಳಾದ ಜೈನರನ್ನು ಹೇಗೆ ನಂಬುವರು?

• ಬೌದ್ಧರು ಅಥವಾ ಜೈನರು ದೇವರನ್ನು ನಂಬುವುದಿಲ್ಲ. ಅವರ ಧಾರ್ಮಿಕ ಪರಿಶ್ರಮವೆಲ್ಲ ಎಲ್ಲಾ ಧರ್ಮಕ್ಕೂ ಮುಖ್ಯವಾದ ಕೇಂದ್ರವಾದ ಅಂದರೆ ಮಾನವನಲ್ಲಿ ಭಗವಂತನು ವಿಕಸಿಸುವ ಕ್ರಿಯೆಯ ಮೇಲೆ ನಿಂತಿದೆ. ಅವರು ತಂದೆಯನ್ನು ಕಂಡಿಲ್ಲ; ಮಗನನ್ನು ಕಂಡಿರುವರು. ಯಾರು ಮಗನನ್ನು ಕಂಡಿಲ್ಲವೋ ಅವರು ತಂದೆಯನ್ನು ಕಂಡಿಲ್ಲದಂತೆಯೆ.

ಸಹೋದರರೆ, ಇದು ಹಿಂದೂಗಳ ಧಾರ್ಮಿಕ ಭಾವನೆಯ ಸಂಕ್ಷೇಪ ಪರಿಚಯ. ತಮ್ಮ ಆಲೋಚನೆಗಳನ್ನೆಲ್ಲ ಹಿಂದು ಅನುಷ್ಠಾನಕ್ಕೆ ತರದೆ ಇರಬಹುದು. ಆದರೆ ಜಗತ್ತಿನಲ್ಲಿ ಯಾವುದಾದರೂ ಒಂದು ಸರ್ವ ಸಾಮಾನ್ಯವಾದ ಧರ್ಮವಿರಬೇಕಾದರೆ ಅದು ಯಾವ ಒಂದು ಕಾಲ ಮತ್ತು ದೇಶದ ಮೇರೆಗೂ ಮೀರಿರಬೇಕು. ಅದು ಅನಂತವಾಗಿರಬೇಕು, ದೇವರಂತೆ ಅದು ಬೋಧಿಸಬೇಕು. ಧರ್ಮಭಾಸ್ಕರನು ಕೃಷ್ಣನ ಅನು ಯಾಯಿಗಳ ಮೇಲಾಗಲಿ, ಕ್ರೈಸ್ತನ ಅನುಯಾಯಿಗಳ ಮೇಲೆ ಆಗಲಿ, ಪಾಪಿಗಳಾಗಲಿ, ಅಥವಾ ಪುಣ್ಯಾತ್ಮರಾಗಲಿ, ಎಲ್ಲರ ಮೇಲೆಯೂ ಒಂದೇ ಸಮನಾಗಿ ಬೆಳಗಬೇಕು. ಅದು ಕೇವಲ ಬ್ರಾಹ್ಮಣ ಅಥವಾ ಬೌದ್ಧ, ಕ್ರೈಸ್ತ ಅಥವಾ ಮಹಮ್ಮದೀಯ ಆಗಿರಬಾರದು. ಇವುಗಳನ್ನೆಲ್ಲ ಕೂಡಿ ಕೊಂಡಿರಬೇಕು. ಆದರೂ ಹೆಚ್ಚು ಅಭಿವೃದ್ಧಿಯಾಗುವುದಕ್ಕೆ ಬೇಕಾದಷ್ಟು ಅವಕಾಶವಿರಬೇಕು. ಅದು ಹೃದಯ ವೈಶಾಲ್ಯದಿಂದ ಎಲ್ಲರನ್ನೂ ಚಾಚಿ ತಬ್ಬುವಂತೆ ಇರಬೇಕು. ಮೂರ್ಖನಿಗಿಂತ ಮೇಲಲ್ಲದ ಇನ್ನೂ ಬಹಳ ಕೆಳಗೆ ತೆವಳುತ್ತಿರುವ ಕಾಡುಮನುಷ್ಯನಿಂದ ಹಿಡಿದು, ಅವನೇನು ಮಾನ ವನೇ ಅಲ್ಲವೇ ಎಂಬ ವಿಸ್ಮಯವನ್ನುಂಟುಮಾಡಿ ಇಡೀ ಸಮಾಜವೇ ಭಕ್ತಿ ಗೌರವಗಳಿಂದ ನೋಡುತ್ತಿರುವ, ಮಾನವತೆಯ ತುತ್ತತುದಿಯ ಮೇಲೆ ನಿಂದು ಹೃದಯ ಮತ್ತು ಮೇಧಾಶಕ್ತಿಗಳಿಂದ ಕಂಗೊಳಿಸುತ್ತಿರುವ ವ್ಯಕ್ತಿ ಯವರೆಗೆ ಪ್ರತಿಯೊಬ್ಬರಿಗೂ ಅಲ್ಲಿ ಸ್ಥಳವಿರಬೇಕು. ಆ ಧರ್ಮದ ಕಾರ್ಯ ನೀತಿಯಲ್ಲಿ ಅನ್ಯಮತ ಹಿಂಸೆ ಅಥವಾ ಅಸಹಿಷ್ಣುತೆಗೆ ಸ್ಥಳವಿರಕೂಡದು. ಅದು ಪ್ರತಿಯೊಬ್ಬ ಸ್ತ್ರೀಪುರುಷರಲ್ಲಿಯೂ ಪವಿತ್ರತೆಯನ್ನು ಕಂಡುಹಿಡಿ ಯುವಂತೆ ಇರಬೇಕು. ಅದರ ಗುರಿಯೆಲ್ಲ, ಶಕ್ತಿಯೆಲ್ಲ ಮಾನವನಿಗೆ

ನೈಜವಾದ ಆತನ ಪವಿತ್ರತೆಯನ್ನು ಕಂಡುಕೊಳ್ಳುವುದಕ್ಕೆ ಸಹಾಯ ಮಾಡುವುದರಲ್ಲಿ ಕೇಂದ್ರೀಕೃತವಾಗಿರಬೇಕು. ಅಂತಹ ಧರ್ಮವನ್ನು ಕೊಡಿ; ಜನಾಂಗವೆಲ್ಲ ನಿಮ್ಮನ್ನು ಅನುಸರಿಸುವುದು. ಅಶೋಕನ ಸಭೆ ಕೇವಲ ಬೌದ್ಧರ ಸಭೆಯಾಗಿತ್ತು. ಅಕ್ಬರನದು ಕಾರ್ಯತಃ ಇದಕ್ಕಿಂತ ಸ್ವಲ್ಪ ವಿಸ್ತಾರವಾಗಿದ್ದರೂ ಅದು ಕೇವಲ ಒಂದು ಚರ್ಚಾಕೂಟವಾಗಿತ್ತು. ದೇವರು ಎಲ್ಲಾ ಧರ್ಮದಲ್ಲಿ ಇರುವನು ಎಂಬುದನ್ನು ಜಗತ್ತಿನ ಮೂಲೆ ಮೂಲೆಗೆ ಸಾರುವ ಕಾರ್ಯ ಅಮೇರಿಕಾ ದೇಶಕ್ಕೆ ಮೀಸಲಾಯಿತು.

ಯಾರು ಹಿಂದೂಗಳ ಬ್ರಹ್ಮನೋ, ಯಾರು ಜಾರತೂಸ್ತ್ರ ಸಂಪ್ರದಾಯದ ಅಹುರಮಾಜ್ದನೋ, ಬೌದ್ಧರ ಬುದ್ಧನೋ, ಯಹೂದ್ಯರ ಜಹೋವನೋ, ಕ್ರೈಸ್ತರ ಸ್ವರ್ಗದಲ್ಲಿರುವ ತಂದೆಯೋ, ಅವನು ನಿಮ್ಮ ಈ ಘನ ಉದ್ದೇಶವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಶಕ್ತಿಯನ್ನು ಕೊಡಲಿ. ಪೂರ್ವ ದಿಗಂತದಲ್ಲಿ ತಾರೆ ಉದಿಸಿತು. ಕ್ರಮೇಣ ಅದು ಪಶ್ಚಿಮದ ಕಡೆ ಪ್ರಯಾಣಮಾಡಿತು. ಕೆಲವು ವೇಳೆ ಮಬ್ಬು ಮಬ್ಬಾಗಿ, ಕೆಲವು ವೇಳೆ ಜಾಜ್ವಲ್ಯಮಾನವಾಗಿ ಬೆಳಗುತ್ತ ಪ್ರಪಂಚವನ್ನು ಒಂದು ಪ್ರದಕ್ಷಿಣೆ ಮಾಡಿ ಪುನಃ ಅದೇ ಪೂರ್ವದಿಗಂತದಲ್ಲಿ ಸಾನ್ಪೋನದಿಯ ತೀರದಲ್ಲಿ ಹಿಂದಿಗಿಂತಲೂ ಸಾವಿರಪಾಲು ಕಾಂತಿಯುತವಾಗಿ ಉದಯಿಸುತ್ತಿದೆ.

ಹೇ ಕೊಲಂಬಿಯ! ಸ್ವಾತಂತ್ರ್ಯದ ತವರೂರೆ! ನಿನಗೆ ಜಯವಾಗಲಿ. ಯಾರು ನೆರೆಯವರ ರಕ್ತದಲ್ಲಿ ತಮ್ಮ ಕೈಯನ್ನು ಅದ್ದಿಲ್ಲವೊ, ಯಾರು ಶ್ರೀಮಂತರಾಗುವುದಕ್ಕೆ ಅತಿ ಶೀಘ್ರವಾದ ಹಾದಿಯೆ ತಮ್ಮ ನೆರೆಹೊರೆಯವರನ್ನು ಸೂರೆಮಾಡುವುದು ಎಂಬುದನ್ನು ಎಂದೂ ಅರಿಯರೊ, ಸಮನ್ವಯ ಪತಾಕೆಯನ್ನು ಹಿಡಿದು ನಾಗರಿಕತೆಯ ಮುಂದಾಳಾಗಿ ನಡೆದ ಒಂದು ಮಹಾಗೌರವ ನಿನ್ನ ಪಾಲಿನದು.

ಧರ್ಮಕ್ಕಲ್ಲ ಭರತಖಂಡದಲ್ಲಿ ಬರಗಾಲ

[೨೦ ನೇ ಸೆಪ್ಟೆಂಬರ್, ೧೮೯೩]

ಕ್ರೈಸ್ತರು ಯಾವಾಗಲೂ ಹಿತಕಾರಿಯಾದ ವಿಮರ್ಶೆಯನ್ನು ಸ್ವೀಕರಿಸಲು ಯೋಗ್ಯರಾಗಿರಬೇಕು. ನಾನು ನಿಮ್ಮಲ್ಲಿ ಅಲ್ಪ ದೋಷವನ್ನು ತೋರಿದರೆ ಅದರಿಂದ ನಿಮಗೆ ಬಾಧಕವೇನೂ ಇಲ್ಲವೆಂದು ತಿಳಿಯುತ್ತೇನೆ. ಕ್ರೈಸ್ತಮತಾನುಯಾಯಿಗಳೆ, ನೀವು ಕ್ರೈಸ್ತರಲ್ಲದವರ ಆತ್ಮವನ್ನು ಉದ್ಧರಿಸಲು ಅಷ್ಟೊಂದು ಕಾತುರರಾಗಿರುವಿರಲ್ಲ, ಉಪವಾಸದಿಂದ ನಶಿಸಿ ಹೋಗುತ್ತಿರುವ ಅವರ ದೇಹವನ್ನು ಕಾಪಾಡುವುದಕ್ಕಾಗಿ ಏತಕ್ಕೆ ಪ್ರಯತ್ನಪಡಬಾರದು? ಭರತಖಂಡದಲ್ಲಿ ಭಯಂಕರ ಕ್ಷಾಮದಿಂದ ಸಾವಿರಾರು ಜನರು ಉಪವಾಸದಿಂದ ಸತ್ತರು. ಆದರೂ ಕ್ರೈಸ್ತರು ಏನನ್ನೂ ಮಾಡಲಿಲ್ಲ. ಭರತಖಂಡದ ಮೂಲೆ ಮೂಲೆಯಲ್ಲಿ ನೀವು ಚರ್ಚುಗಳನ್ನು ಕಟ್ಟುತ್ತೀರಿ. ಪೌರಾತ್ಯದೇಶಗಳಲ್ಲಿ ನಾವು ಅತಿ ಮುಖ್ಯವಾಗಿ ಗಮನವಲ್ಲಿಡಬೇಕಾಗಿರುವುದು ಧಾರ್ಮಿಕ ಬರಗಾಲವನ್ನಲ್ಲ. ಅವರಿಗೆ ಧರ್ಮ ಹೇರಳವಾಗಿದೆ. ಭರತಖಂಡದಲ್ಲಿ ಹಸಿವಿನಿಂದ ನರಳುತ್ತಿರುವ ಕೋಟ್ಯಂತರ ಜನರು ದುಃಖದಿಂದ ಒಣಗಿದ ಗಂಟಲಿನಲ್ಲಿ ಒಂದು ತುತ್ತು ಕೂಳಿಗಾಗಿ ಅಳುತ್ತಿರುವರು. ಅವರು ನಮ್ಮನ್ನು ಕೇಳುವದು ಅನ್ನ. ಆದರೆ ನಾವು ಅವರಿಗೆ ಕೊಡುವುದು ಕಲ್ಲು. ಉಪವಾಸದಿಂದ ನರಳುತ್ತಿರುವವರಿಗೆ ಧರ್ಮವನ್ನು ಕೊಡುವದು ಒಂದು ಅಪಮಾನ. ಉಪವಾಸದಿಂದ ನರಳುತ್ತಿರುವವರಿಗೆ ತತ್ತ್ವೋಪದೇಶ ಮಾಡುವುದೊಂದು ಅಪಮಾನ. ಭರತಖಂಡದಲ್ಲಿ ಹಣಕ್ಕೋಸುಗ ಯಾರು ಧರ್ಮವನ್ನು ಬೋಧಿಸುವರೊ ಅವರು ತಮ್ಮ ಜಾತಿಯನ್ನು ಕಳೆದುಕೊಳ್ಳುವರು. ಜನರು ಅವರ ಮುಖದ ಮೇಲೆ ಉಗುಳುವರು. ನನ್ನ ದೇಶದಲ್ಲಿ ದಾರಿದ್ರ್ಯದಿಂದ ನರಳುತ್ತಿರುವವರಿಗೆ ಸಹಾಯವನ್ನು ಬೇಡುವುದಕ್ಕೆ ನಾನು ಈ ದೇಶಕ್ಕೆ ಬಂದೆ. ಕ್ರೈಸ್ತರಿಂದ, ಕ್ರೈಸ್ತದೇಶದಲ್ಲಿ, ಕ್ರೈಸ್ತರಲ್ಲದವರಿಗೆ, ಸಹಾಯವನ್ನು ಹೊಂದುವುದು ಎಷ್ಟು ಕಷ್ಟವೆಂಬುದು ಈಗ ನನಗೆ ಚೆನ್ನಾಗಿ ಗೊತ್ತಾಯಿತು.

ಬೌದ್ಧ ಧರ್ಮ ಹಿಂದೂ ಧರ್ಮದ ಪೂರೈಕೆ

[೨೬ ನೇ ಸೆಪ್ಟೆಂಬರ್ ೧೮೯೩]

ನಿಮಗೆ ತಿಳಿದಿರುವಂತೆಯೆ ನಾನು ಬೌದ್ಧನಲ್ಲ. ಆದರೂ ನಾನೊಬ್ಬ ಬೌದ್ಧ. ಚೈನ, ಜಪಾನ್ ಮತ್ತು ಸಿಂಹಳ ದ್ವೀಪದವರು ಆ ಮಹಾ ಪುರುಷನ ಘನಸಂದೇಶವನ್ನು ಅನುಸರಿಸಿದರೆ ಭರತಖಂಡ ಅವನನ್ನು ಅವತಾರವೆಂದು ಆರಾಧಿಸುವುದು. ನಾನು ಬೌದ್ಧ ಧರ್ಮವನ್ನು ವಿಮರ್ಶಿಸುತ್ತೇನೆ ಎಂಬುದನ್ನು ನೀವು ಈಗತಾನೆ ಕೇಳಿದಿರಿ. ಆದರೆ ಅದರಿಂದ ನೀವು ಇಷ್ಟನ್ನು ಮಾತ್ರ ತಿಳಿದುಕೊಳ್ಳಬೇಕು. ನಾನು ಯಾರನ್ನು ಅವತಾರ ಎಂದು ಪೂಜಿಸುತ್ತೇನೆಯೊ ಅವರನ್ನು ದೂಷಿಸುವ ಗೋಜಿಗೆ ಹೋಗುವುದಿಲ್ಲ. ಆದರೆ ಬುದ್ಧನ ವಿಚಾರವಾಗಿ ನಮ್ಮ ಅಭಿಪ್ರಾಯ ವೇನೆಂದರೆ, ಅವನ ಶಿಷ್ಯರು ಬುದ್ಧನನ್ನು ಚನ್ನಾಗಿ ತಿಳಿದುಕೊಳ್ಳಲಿಲ್ಲ ಎಂಬುದು. ಈಗ ಹಿಂದೂ ಧರ್ಮಕ್ಕೂ ಬೌದ್ಧ ಧರ್ಮಕ್ಕೂ ಇರುವ ಸಂಬಂಧ, ಕ್ರೈಸ್ತ ಧರ್ಮಕ್ಕೂ ಯಹೂದ್ಯ ಮತಕ್ಕೂ ಇರುವ ಸಂಬಂಧ ದಂತೆ. ಏಸುಕ್ರಿಸ್ತನು ಯಹೂದ್ಯನಾಗಿದ್ದನು. ಶಾಕ್ಯಮುನಿ ಹಿಂದೂ ವಾಗಿದ್ದನು. ಯಹೂದ್ಯರು ಏಸುಕ್ರಿಸ್ತನನ್ನು ನಿರಾಕರಿಸಿದುದು ಮಾತ್ರ ವಲ್ಲ. ಅವನನ್ನು ಶಿಲುಬೆಗೆ ಏರಿಸಿದರು. ಹಿಂದೂಗಳು ಶಾಕ್ಯಮುನಿ ಯನ್ನು ದೇವರೆಂದು ಸ್ವೀಕರಿಸಿ ಅವನನ್ನು ಆರಾಧಿಸುವರು. ಹಿಂದೂ ಗಳಿಂದ ನಾವು ಆಧುನಿಕ ಬೌದ್ಧರಿಗೂ ಮತ್ತು ನಾವು ಯಾವುದನ್ನು ಬುದ್ಧನ ಉಪದೇಶವೆಂದು ಭಾವಿಸುತ್ತೇವೊ ಅದಕ್ಕೂ ತೋರಬೇಕೆಂದಿರುವ ವ್ಯತ್ಯಾಸ ಇದು: ಶಾಕ್ಯಮುನಿ ಏನನ್ನೂ ಹೊಸದಾಗಿ ಬೋಧಿಸುವುದಕ್ಕೆ ಬರಲಿಲ್ಲ. ಏಸುಕ್ರಿಸ್ತನಂತೆ ಅವನೂ ಪೂರ್ಣಗೊಳಿಸುವುದಕ್ಕೆ ಬಂದನೇ ಹೊರತು ಧ್ವಂಸಮಾಡುವುದಕ್ಕೆ ಬರಲಿಲ್ಲ. ಏಸುಕ್ರಿಸ್ತನ ವಿಷಯದಲ್ಲಿ ಅವನನ್ನು ಅರ್ಥಮಾಡಿಕೊಳ್ಳದೆ ಇದ್ದವರು ಆಗ ಇದ್ದ ಯಹೂದ್ಯರು. ಆದರೆ ಬುದ್ಧನ ವಿಷಯದಲ್ಲಿ ಅವನನ್ನು ತಿಳಿದುಕೊಳ್ಳದೆ ಇದ್ದವರು ಅವನ ಅನುಯಾಯಿಗಳು. ಹೇಗೆ ಯಹೂದ್ಯರು ಹಳೆಯ ಬೈಬಲ್ಲು ಕ್ರೈಸ್ತನಿಂದ ಪರಿಪೂರ್ಣವಾಯಿತು ಎಂಬುದನ್ನು ತಿಳಿಯದೆ ಹೋದರೊ, ಹಾಗೆಯೆ ಬೌದ್ಧರು ಹಿಂದೂಧರ್ಮದ ಸತ್ಯವು ಬುದ್ಧನಿಂದ ಪರಿಪೂರ್ಣತೆಯನ್ನು ಪಡೆಯಿತು ಎಂಬುದನ್ನು ತಿಳಿದುಕೊಳ್ಳಲಿಲ್ಲ. ನಾನು ಮತ್ತೊಮ್ಮೆ ಹೇಳು ತ್ತೇನೆ. ಶಾಕ್ಯಮುನಿ ಧ್ವಂಸಮಾಡುವುದಕ್ಕೆ ಬರಲಿಲ್ಲ. ಅತನು ತರ್ಕ

ಶುನ್ಯವಾದ ಹಿಂದೂಧರ್ಮದ ಪರಿಪೂರ್ಣತೆ; ಅದು ಯುಕ್ತಪೂರಿತವಾದ ಸಿದ್ಧಾಂತ. ಅವನು ಹಿಂದೂಧರ್ಮವನ್ನು ಪರಿಪೂರ್ಣಗೊಳಿಸಿದನು.

ಹಿಂದೂಧರ್ಮ ಕರ್ಮಖಾಂಡ, ಜ್ಞಾನಖಾಂಡಗಳೆಂದು ಎರಡು ಭಾಗವಾಗಿದೆ. ಜ್ಞಾನಖಾಂಡವನ್ನು ಮುಖ್ಯವಾಗಿ ಓದುವವರು ಸನ್ಯಾಸಿಗಳು.

ಜ್ಞಾನಖಾಂಡದಲ್ಲಿ ಜಾತಿಬೇಧಗಳಿಲ್ಲ. ಅತ್ಯುಚ್ಚ ಜಾತಿಯವನು ಮತ್ತು ಅತಿ ನೀಚಜಾತಿಯವನು ಬೇಕಾದರೆ ಭರತಖಂಡದಲ್ಲಿ ಸನ್ಯಾಸಿಯಾಗಬಹುದು. ಆಗ ಎರಡು ಜಾತಿಗಳೂ ಸರಿಸಮಾನವಾಗುವುವು. ಧರ್ಮದಲ್ಲಿ ಜಾತಿಯಿಲ್ಲ. ಜಾತಿ ಕೇವಲ ಒಂದು ಸಾಮಾಜಿಕ ವ್ಯವಸ್ಥೆ. ಶಾಕ್ಯಮುನಿ ಸನ್ಯಾಸಿಯಾಗಿದ್ದನು. ಗುಪ್ತವೇದಶಾಸ್ತ್ರಗಳಿಂದ ತತ್ತ್ವವನ್ನು ಹೊರತೆಗೆದು ಜಗತ್ತಿನಲ್ಲಿ ಗಂಟಾಘೋಷವಾಗಿ ಸಾರುವಷ್ಟು ಅವನ ಹೃದಯ ವಿಶಾಲವಾಗಿತ್ತು. ಇದೇ ಅವನ ಮಹಿಮೆ. ಧಾರ್ಮಿಕ ಪ್ರಚಾರಕರ ತಂಡವನ್ನು ಜಗತ್ತಿಗೆ ತಂದವರಲ್ಲಿ ಮೊಟ್ಟಮೊದಲಿಗನು. ಅಷ್ಟು ಮಾತ್ರವಲ್ಲ. ಅನ್ಯರಿಗೆ ತನ್ನ ಮತದೀಕ್ಷೆಯನ್ನು ಕೊಡುವ ಸಂಕಲ್ಪ ಮಾಡಿದವರಲ್ಲಿಯೂ ಮೊಟ್ಟಮೊದಲಿಗನು.

ಗುರುವಿನ ಮಹಾಮಹಿಮೆ ಪ್ರತಿಯೊಬ್ಬರಿಗೂ, ಅದರಲ್ಲಿಯೂ ಅಜ್ಞಾನಿಗಳು ಮತ್ತು ದೀನರ ಮೇಲೆ ತೋರಿದ ಅದ್ಭುತವಾದ ಸಹಾನುಭೂತಿಯಲ್ಲಿತ್ತು. ಅವನ ಕೆಲವು ಶಿಷ್ಯರು ಬ್ರಾಹ್ಮಣರು. ಬುದ್ಧನು ಉಪದೇಶಮಾಡುತ್ತಿದ್ದಾಗ ಸಂಸ್ಕೃತ ಅಂದು ಎಲ್ಲರೂ ಮಾತನಾಡುವ ಭಾಷೆಯಾಗಿರಲಿಲ್ಲ, ಅದು ಕೇವಲ ಪಂಡಿತರ ಗ್ರಂಥದಲ್ಲಿ ಮಾತ್ರ ಇತ್ತು. ಬುದ್ಧನ ಕೆಲವು ಬ್ರಾಹ್ಮಣ ಶಿಷ್ಯರು ಸಂಸ್ಕೃತಕ್ಕೆ ಅವನ ಉಪದೇಶವನ್ನು ಭಾಷಾಂತರ ಮಾಡಲು ಇಚ್ಛಿಸಿದರು. ಆದರೆ ಬುದ್ಧನು ವಿಶದವಾಗಿ, "ನಾನು ಬಡವರಿಗೆ, ಜನಸಾಮಾನ್ಯರಿಗೆ, ಅವರ ಭಾಷೆಯಲ್ಲಿ ಮಾತನಾಡುವೆ" ಎಂದನು. ಆದಕಾರಣವೇ ಇಂದಿಗೂ ಅವನ ಉಪದೇಶದ ಬಹುಪಾಲು ಇರುವುದು ಅಂದಿನ ಪಾಳೀಭಾಷೆಯಲ್ಲಿ.

ಸಿದ್ಧಾಂತ ಹೇಗಾದರೂ ಇರಲಿ, ತತ್ತ್ವ ಯಾವ ರೀತಿಯಲ್ಲಿ ಬೇಕಾದರೂ ಇರಲಿ, ಎಲ್ಲಿಯವರೆಗೂ ಪ್ರಪಂಚದಲ್ಲಿ ಸಾವು ಎಂಬುದು ಇದೆಯೊ, ಮಾನವ ಹೃದಯದಲ್ಲಿ ದುರ್ಬಲತೆ ಎಂಬುದು ಇದೆಯೊ, ಎಲ್ಲಿಯವರೆವಿಗೂ ಮಾನವನ ಹೃದಯಾಂತರಾಳದಿಂದ ಬಳಲಿದಾಗ ಒಂದು ಪ್ರಾರ್ಥನೆ ಬರುವುದೊ, ಅಲ್ಲಿಯವರೆವಿಗೂ ದೇವರಲ್ಲಿ ನಂಬಿಕೆ ಇದ್ದೇ ಇರುವುದು.

ತತ್ತ್ವರಂಗದಲ್ಲಿ ಮಹಾಗುರುವಿನ ಶಿಷ್ಯರು ವೇದಗಳೆಂಬ ದೊಡ್ಡ ಬಂಡೆಯನ್ನು ಎದುರಿಸಿದರು: ಆದರೆ ಅದನ್ನು ನಾಶಮಾಡಲಾಗಲಿಲ್ಲ. ಮತ್ತೊಂದು ಕಡೆ [ಅನುಷ್ಠಾನ ರಂಗದಲ್ಲಿ] ಪ್ರತಿಯೊಬ್ಬ ಸ್ತ್ರೀಪುರುಷರು ಸನಾತನವಾದ ಯಾವ ದೇವರನ್ನು ಅತ್ಯಂತ ಪ್ರೀತಿಯಿಂದ ಅಪ್ಪಿಕೊಂಡಿದ್ದರೊ ಅದನ್ನು ಕಸಿದುಕೊಂಡರು. ಇದರ ಪರಿಣಾಮವೆ ಬೌದ್ಧ ಧರ್ಮ ಸ್ವಭಾವತಃ ಮಾಯವಾಗಬೇಕಾಯಿತು. ಇದರ ಪರಿಣಾಮವೆ ಬೌದ್ಧ ಧರ್ಮದ ತವರೂರು ಎನಿಸಿದ ಭರತಖಂಡದಲ್ಲಿ ತಾನು ಬೌದ್ಧನೆಂದು ಹೇಳಿಕೊಳ್ಳುವವನೊಬ್ಬನೂ ಇಲ್ಲವಾಯಿತು.

ಆದರೆ ಅದೇ ಕಾಲದಲ್ಲಿ ಬ್ರಾಹ್ಮಣಧರ್ಮಕ್ಕೂ ಕೂಡ ಸ್ವಲ್ಪ ನಷ್ಟವಾಯಿತು. ಬೌದ್ಧ ಧರ್ಮ ಜನಸಾಮಾನ್ಯರನ್ನು ಮೇಲೆತ್ತಿ, ಇನ್ನೊಬ್ಬರನ್ನು ಉತ್ತಮಗೊಳಿಸಬೇಕೆಂಬ ಉತ್ಕಟ ಆಕಾಂಕ್ಷೆ ಸರ್ವರಿಗೂ ಸಹಾನುಭೂತಿ ಮತ್ತು ದಯೆಯನ್ನು ಬೀರಿತು. ಆಗ ಭರತಖಂಡದ ವಿಷಯವಾಗಿ ಬರೆದ ಗ್ರೀಕ್ ಇತಿಹಾಸಜ್ಞನು, "ಸುಳ್ಳನ್ನು ಹೇಳುವ ಹಿಂದುವೇ ಗೊತ್ತಿಲ್ಲ. ಜಾರೆ ಎಂದು ಕರೆಸಿಕೊಳ್ಳುವ ಹೆಂಗಸೇ ಇಲ್ಲ" ಎಂದು ಹೇಳಿಸಿಕೊಳ್ಳುವಷ್ಟು ಹಿಂದೂ ಸಮಾಜವನ್ನು ಉತ್ತಮಸ್ಥಿತಿಗೆ ತಂದ ಅಮೋಘವಾದ ಸುಧಾರಣೆಗಳೆಲ್ಲ ಮಾಯವಾದುವು.

ಹಿಂದೂ ಧರ್ಮ ಬೌದ್ಧ ಧರ್ಮವಿಲ್ಲದೆ ಬಾಳಲಾರದು. ಬೌದ್ಧ ಧರ್ಮ ಹಿಂದೂ ಧರ್ಮವಿಲ್ಲದೆ ಬಾಳಲಾರದು. ಆದಕಾರಣವೆ ತಿಳಿದುಕೊಳ್ಳಿ, ಪರಸ್ಪರ ಭೇದ ಏನನ್ನು ತೋರಿವೆ ಎಂಬುದನ್ನು. ಬ್ರಾಹ್ಮಣರ ಪಾಂಡಿತ್ಯ ಮತ್ತು ತತ್ತ್ವವಿಲ್ಲದೆ ಬೌದ್ಧ ಧರ್ಮ ನಿಂತುಕೊಳ್ಳಲಾರದು. ಅಥವಾ ಬುದ್ಧದೇವನ ಹೃದಯವಿಲ್ಲದೆ ಹಿಂದು ತನ್ನ ಕಾಲಮೇಲೆ ನಿಂತುಕೊಳ್ಳಲಾರ. ಬೌದ್ಧರಿಗೂ ಬ್ರಾಹ್ಮಣರಿಗೂ ಇರುವ ಭಿನ್ನಾಭಿಪ್ರಾಯವೆ ಭರತಖಂಡದ ಅವನತಿಗೆ ಕಾರಣ. ಆದಕಾರಣವೆ ಭರತಖಂಡದಲ್ಲಿ ಮೂವತ್ತುಕೋಟಿ ಭಿಕ್ಷುಕರಿರುವುದು. ಆದಕಾರಣವೆ ಭರತಖಂಡವು ಕಳೆದ ಸಾವಿರ ವರ್ಷದಿಂದಲೂ ಗೆದ್ದವರ ಗುಲಾಮರಾಗಿರುವುದು. ಹಾಗಾದರೆ ಈಗ ಬ್ರಾಹ್ಮಣನ ಅದ್ಭುತಧೀಶಕ್ತಿ, ಪವಿತ್ರವಾದ ಆ ಮಹಾ ಆಚಾರ್ಯನ ಪ್ರೇಮ, ಮತ್ತೊಬ್ಬರಿಗೆ ಮರುಗುವಂತೆ ಮಾಡಿದ ವಿಶ್ವಾನುಕಂಪ ಶಕ್ತಿಯನ್ನು ಒಂದುಗೂಡಿಸೋಣ.

ಅಧಿವೇಶನದ ಕೊನೆಯ ಭಾಷಣ

[೨೭ ನೇ ಸೆಪ್ಟೆಂಬರ್ ೧೮೯೩]

ವಿಶ್ವಧರ್ಮ ಸಮ್ಮೇಳನ ಸಾಂಗವಾಗಿ ನೆರವೇರಿತು. ದಯಾಮಯನಾದ ತಂದೆ ಈ ಸಮ್ಮೇಳನವನ್ನು ಅನುಷ್ಠಾನಕ್ಕೆ ತರುವುದಕ್ಕೆ ಯತ್ನಿಸಿದವರಿಗೆಲ್ಲ ಸಹಾಯಮಾಡಿರುವನು. ಅವರ ನಿಸ್ವಾರ್ಥ ಪ್ರಯತ್ನವನ್ನು ಜಯಪ್ರದವಾಗಿ ಮಾಡಿರುವನು.

ಯಾವ ಪವಿತ್ರಾತ್ಮರು ಉದಾರಹೃದಯ ಸತ್ಯ ಮತ್ತು ಪ್ರೇಮದಿಂದ ಇಂತಹ ಅಮೋಘವಾದ ಕನಸನ್ನು ಮೊದಲು ಕಂಡು ನಂತರ ಅದನ್ನು ಫಲಕಾರಿಯಾಗಿ ಮಾಡಿದರೊ ಅವರಿಗೆ ನನ್ನ ವಂದನೆಗಳು. ಉದಾರ ಮನೋಭಾವವನ್ನು ಈ ವೇದಿಕೆಯ ಮೇಲೆ ಮಳೆಗರೆದವರಿಗೆ ನನ್ನ ಅನಂತ ವಂದನೆ. ನನಗೆ ತೋರಿದ ಒಂದೇ ಸಮನಾದ ದಯಾದೃಷ್ಟಿ, ಮತ್ತು ಮತಭೇದಗಳ ಘರ್ಷಣವನ್ನು ತಗ್ಗಿಸುವದಕ್ಕಾಗಿ ಬಂದ ಎಲ್ಲಾ ಅಭಿಪ್ರಾಯವನ್ನು ಮೆಚ್ಚಿರುವದಕ್ಕೂ ನನ್ನ ಅನಂತ ವಂದನೆ. ಈ ಸಮನ್ವಯವಾಣಿಯ ಮಧ್ಯೆ ಕೆಲವು ವೇಳೆ ಅಸಹನೀಯವಾದ ಶಬ್ದಗಳು ಇದ್ದವು. ಅವರು ತಮ್ಮ ಭಿನ್ನಾಭಿಪ್ರಾಯ ಸ್ಪಷ್ಟವಾಗಿ ತೋರಿದುದರಿಂದ ಒಟ್ಟು ಸಮನ್ವಯವನ್ನು ಮಧುರತರವಾಗಿ ಮಾಡಿರುವರು. ಅವರಿಗೂ ನನ್ನ ಪ್ರತ್ಯೇಕವಂದನೆ.

ಧಾರ್ಮಿಕ ಐಕ್ಯತೆಯ ಸರ್ವಸಾಮಾನ್ಯವಿಷಯವಾಗಿ ಎಷ್ಟೋ ಹೇಳಿ ಆಗಿದೆ. ಅದರ ವಿಷಯವಾಗಿ ಈಗ ನನ್ನ ಸಿದ್ಧಾಂತವನ್ನು ಹೇಳುವುದಕ್ಕೆ ಹೊರಟಿಲ್ಲ. ಯಾವುದಾದರೂ ಒಂದು ಧರ್ಮದ ಜಯದಿಂದ, ಅಥವಾ ಉಳಿದ ಧರ್ಮಗಳ ನಾಶದಿಂದ ಅದು ಬರುತ್ತದೆ ಎಂದು ಇಲ್ಲಿ ಇರುವವರಲ್ಲಿ ಯಾರಾದರೂ ಆಶಿಸಿದರೆ ಅವರಿಗೆ, “ನನ್ನ ಸಹೋದರನೆ, ನಿನ್ನದು ಅಸಾಧ್ಯ ಬಯಕೆ” ಎನ್ನುತ್ತೇನೆ. ಕ್ರೈಸ್ತನು ಹಿಂದುವಾಗುವುದಕ್ಕೆ ನಾನು ಬಯಸುವೆನೆ? ಭಗವಂತ ಅದನ್ನು ವಿರೋಧಿಸಲಿ. ಹಿಂದೂಗಳು ಅಥವಾ ಬೌದ್ಧರು ಕ್ರೈಸ್ತರಾಗಬೇಕೆಂದು ನಾನು ಬಯಸುವನೆ? ಭಗವಂತ ಅದನ್ನು ಪ್ರತಿರೋಧಿಸಲಿ.

ಬೀಜವನ್ನು ನೆಲದಲ್ಲಿ ಬಿತ್ತಿ ಆಗಿದೆ. ಮಣ್ಣು, ಗಾಳಿ, ನೀರು ಅದರ ಸುತ್ತಲೂ ಇವೆ. ಬೀಜ ಮಣ್ಣಾಗುವುದೆ? ಗಾಳಿಯಾಗುವುದೆ?

ನೀರಾಗುವುದೆ? ಇಲ್ಲ, ಅದೊಂದು ಸಸಿಯಾಗುವುದು. ಅದು ತನ್ನ ಬೆಳವಣಿಗೆಯ ನಿಯಮವನ್ನು ಅನುಸರಿಸಿ ಬೆಳೆಯುವುದು. ಗಾಳಿ, ಮತ್ತು ನೀರು ಇವುಗಳನ್ನು ಜೀರ್ಣಿಸಿಕೊಂಡು, ಅದನ್ನು ಸಸಿಗೆ ಸಂಬಂಧ ಪಟ್ಟ ವಸ್ತುವನ್ನಾಗಿ ಮಾಡಿ ಸಸಿಯಾಗುವುದು.

ಇದರಂತೆಯೇ ಧರ್ಮವೂ ಕೂಡ. ಕ್ರೈಸ್ತನು, ಹಿಂದು ಅಥವಾ ಬೌದ್ಧನಾಗಬೇಕಾಗಿಲ್ಲ. ಪ್ರತಿಯೊಬ್ಬರೂ ಕೂಡ ಮತ್ತೊಬ್ಬರ ಭಾವ ವನ್ನು ಹೀರಿಕೊಂಡು ವ್ಯಕ್ತಿತ್ವವನ್ನು ನಾಶಮಾಡಿಕೊಳ್ಳದೆ ತಮ್ಮ ಬೆಳವಣಿಗೆಯ ನಿಯಮದಂತೆ ಬೆಳೆಯಬೇಕು.

ಜಗತ್ತಿಗೆ ವಿಶ್ವಧರ್ಮ ಸಮ್ಮೇಳನವು ಏನಾದರೂ ತೋರಿದ್ದರೆ ಅದು ಇದು: ಪವಿತ್ರತೆ, ದಯೆ ಮುಂತಾದುವುಗಳು ಜಗತ್ತಿನ ಯಾವ ಒಂದು ಚರ್ಚಿನ ಮಿಾಸಲೂ ಅಲ್ಲ. ಪ್ರತಿಯೊಂದು ಧರ್ಮವೂ ಕೂಡ ಅತ್ಯುತ್ತಮ ರಾದ ಸ್ತ್ರೀಪುರುಷರನ್ನು ಕೊಟ್ಟಿರುವುದು. ಇಷ್ಟೊಂದು ನಿದರ್ಶನಗಳು ಇರುವಾಗಲೂ ಯಾರಾದರು ತಮ್ಮ ಧರ್ಮ ಒಂದೇ ಬಾಳುವುದು, ಉಳಿದ ಧರ್ಮಗಳಾವುವೂ ಇರುವುದಿಲ್ಲವೆಂದು ತಿಳಿದುಕೊಂಡರೆ ನಾನು ಅವರಿಗಾಗಿ ಹೃತ್ಪೂರ್ವಕ ಮರುಗುವೆ. ಪ್ರತಿಯೊಂದು ಧರ್ಮದ ಧ್ವಜದ ಮೇಲೂ ಅವರು ಎಷ್ಟು ವಿರೋಧಿಸಿದರೂ, "ಹೋರಾಟವಲ್ಲ ಸೌಹಾರ್ದ, ನಾಶವಲ್ಲ ಸ್ವೀಕಾರ, ಶಾಂತಿ ಮತ್ತು ಸಮನ್ವಯ, ವೈಮನಸ್ಯವಲ್ಲ" ಎಂಬುದನ್ನು ಬೇಗ ಬರೆಯುವರು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮	೦
ಸ್ವಾಮಿ ವಿವೇಕಾನಂದ (ಕುವೆಂಪು)	೩	೮	೦
ಪತ್ರಮಾಲೆ	೩	೦	೦
ಶ್ರೀ ಶಾರದಾದೇವಿ	೨	೦	೦
ಶ್ರೀ ಶಾರದಾದೇವಿ ಸಂಭಾಷಣೆ	೨	೮	೦
ಶ್ರೀ ರಾಮಕೃಷ್ಣ	೦	೧೨	೦
ರಾಜಯೋಗ	೨	೧೦	೦
ಕರ್ಮಯೋಗ	೧	೮	೦
ಭಕ್ತಿಯೋಗ	೧	೦	೦
ತ್ರಿವೇಣೀ (ಶ್ರೀ ರಾಮಕೃಷ್ಣ, ಸ್ವಾಮಿ ವಿವೇಕಾನಂದ, ಶಾರದಾದೇವಿ ಸಂಕ್ಷಿಪ್ತ ಜೀವನ)	೧	೦	೦
ಶ್ರೀ ಗುರುದೇವರ ವಚನ	೧	೦	೦
ಬ್ರಹ್ಮಾನಂದ ವಚನ ಸುಧೆ	೧	೪	೦
ಶ್ರೀ ರಾಮಕೃಷ್ಣ ಉಪನಿಷತ್	೧	೪	೦
ಪರಿವ್ರಾಜಕ	೧	೪	೦
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪	೦
ವಿದ್ಯಾಭ್ಯಾಸ	೦	೧೦	೦
ಹಿಂದೂ ಧರ್ಮಸಾರ	೦	೧೦	೦
ವರ್ತಮಾನ ಭಾರತ	೦	೧೦	೦
ವಿವೇಕವಾಣಿ	೦	೧೦	೦
ನನ್ನ ಗುರುದೇವ	೦	೮	೦
ಚಿಕಾಗೋ ಉಪನ್ಯಾಸ	೦	೬	೦
ಮುಮುಕ್ಷು ಲಕ್ಷಣ	೦	೪	೦
ನನ್ನ ಜೀವನ ಮತ್ತು ಧ್ಯೇಯ	೦	೪	೦
ಈಶ್ವರಾನುರಾಗ	೦	೪	೦
ನೊಂದ ಜೀವಕ್ಕೆ ಭರವಸೆ	೦	೪	೦
ಭಾರತ ಮಹಿಳೆ	೦	೪	೦
ಕರ್ಮ ರಹಸ್ಯ	೦	೪	೦
ಸಾಧನ	೦	೪	೦
ಅಮರನಾಥಯಾತ್ರೆ	೧	೦	೦
ಅನುಷ್ಠಾನ ವೇದಾಂತ	೧	೦	೦
ಪರಮಾರ್ಥ ಪ್ರಸಂಗ	೨	೦	೦